ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
53 ನೇ ವರ್ಷಕ್ಕೆ ಪಾದಾರ್ಪಣೆ
1973-2025

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ನಗರವಾಣಿ ದಾವಣಗೆರೆ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್ ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 53 ಸಂಚಿಕೆ: 167 DEVANGERE E mail: website: nagaravani.com dngrvani@gmail.com ರಿ.ನಂ.24916/73 KA/SK/DVG -012/2023-25 ಮಂಗಳವಾರ, ನವೆಂಬರ್ 04, 2025 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

ನಗರವಾಣಿ
ವರದಿಗಾರರು ಬೇಕಾಗಿದ್ದಾರೆ
ಕನ್ನಡ ಭಾಷೆಯ ಮೇಲೆ ಪ್ರಭುತ್ವ ಇರುವ, ಪತ್ರಿಕೋದ್ಯಮದಲ್ಲಿ ಅನುಭವ ಇರುವವರು ದಾವಣಗೆರೆ ನಗರವಾಣಿ ಪತ್ರಿಕೆಯಲ್ಲಿ ಕೆಲಸ ಮಾಡಲು ವರದಿಗಾರರಾಗಿ ಬೇಕಾಗಿದ್ದಾರೆ.
ಸಂಜೆ ಮತ್ತು ರಾತ್ರಿ ಕೆಲಸ ಮಾಡುವ ಪುರುಷರಿಗೆ ಆದ್ಯತೆ
ಸಂಪರ್ಕಿಸಿ: 9844060736

### ಬಿಹಾರ ಮುಖಂಡರು ಡಿಕೆಶಿ ಸಿ.ಎಂ ಆಗಲಿ ಎಂದಿದ್ದಕ್ಕೆ ಗರಂ

## ಸಂಪುಟ ಪುನಾರಚನೆಗೆ ಅನುಮತಿ ಪಡೆಯಲು ನ.15 ಕ್ಕೆ ದೆಹಲಿಗೆ ಹೋಗುವೆ: ಸಿದ್ದರಾಮಯ್ಯ



ಬೆಂಗಳೂರು.ನ.3: ಸಂಪುಟ ಪುನಾರಚನೆ ಬಗ್ಗೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಚರ್ಚೆ ಮಾಡುತ್ತೇನೆ. ಇದಕ್ಕಾಗಿಯೇ ನವಂಬರ್ 15ಕ್ಕೆ ದೆಹಲಿಗೆ ಹೋಗುತ್ತಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿಯಾಗಲಿ ಎಂಬ ಬಿಹಾರ ಮುಖಂಡರ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದರು. ಪ್ರಶ್ನೆ ಕೇಳ್ತಿದ್ದಂತೆ ಮಾಧ್ಯಮಗಳ ವಿರುದ್ಧ ಗರಂ ಆದರು.

ಯಾರು ಏನೇ ಹೇಳಿದ್ರೂ ಅದು ಮುಖ್ಯವಲ್ಲ. ಕಾಂಗ್ರೆಸ್ ಹೈಕಮಾಂಡ್ ಹೇಳುವುದಷ್ಟೇ ಮುಖ್ಯ. ಕಾಂಗ್ರೆಸ್ ಹೈಕಮಾಂಡ್ ಏನಾದ್ರೂ ಹೇಳಿದ್ಯಾ ಈ ಬಗ್ಗೆ? ಯಾಕೆ ಪದೇ ಪದೇ ಅದನ್ನೇ ಮಾತನಾಡ್ತೀರಾ. ಜನ ಮಾತನಾಡುತ್ತಿಲ್ಲ, ಮಾಧ್ಯಮದವರೇ ಪದೇ ಪದೇ ಮಾತನಾಡುತ್ತಿದ್ದಾರೆ ಎಂದು ಗರಂ ಆದರು.

ಕಾಂಗ್ರೆಸ್‌ಗೆ ಹೈಕಮಾಂಡ್ ಇದೆ. ಹೈಕಮಾಂಡ್ ಹೇಳುವುದು ಮಾತ್ರವೇ ಮುಖ್ಯ, ಅದೇ ಅಂತಿಮ. ನಾನು ಬಿಹಾರ ಚುನಾವಣೆ ಬಳಿಕ ರಾಹುಲ್ ಗಾಂಧಿ ಅವರನ್ನ ಭೇಟಿ ಮಾಡುತ್ತೇನೆ. ಸಂಪುಟ ಪುನಾರಚನೆ ಬಗ್ಗೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರೊಟ್ಟಿಗೆ ಚರ್ಚೆ ಮಾಡುತ್ತೇನೆ. ಇದಕ್ಕಾಗಿಯೇ ನವಂಬರ್ 15ಕ್ಕೆ ದೆಹಲಿಗೆ ಹೋಗುತ್ತಿದ್ದೇನೆ. ಪುನಾರಚನೆ ಬಗ್ಗೆ ಹೈಕಮಾಂಡ್ ಏನು ಹೇಳುತ್ತೋ ಆ ರೀತಿ ನಡೆದುಕೊಳ್ಳುತ್ತೇನೆ ಎಂದು ಹೇಳಿದರು.

ನಿತೀಶ್ ಕುಮಾರ್‌ಗೆ ಸಿದ್ಧಾಂತ ಇಲ್ಲ:

ಇನ್ನು ಬಿಹಾರ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿ, ಪ್ರಚಾರಕ್ಕೆ ಇಲ್ಲಿಯವರೆಗೆ ನನ್ನನ್ನ ಕರೆದಿಲ್ಲ, ಕರೆದರೆ ಹೋಗುತ್ತೇನೆ. ಬಿಹಾರದಲ್ಲಿ ಈ ಬಾರಿ ಇಂಡಿ ಒಕ್ಕೂಟ ಅಧಿಕಾರಕ್ಕೆ ಬರುತ್ತೆ. ನಿತೀಶ್ ಕುಮಾರ್ ಬಗ್ಗೆ ಜನಕ್ಕೆ ಬೇಸರ ಬಂದಿದೆ. ಏಕೆಂದ್ರೆ ಅವರಿಗೆ ಯಾವುದೇ ಸಿದ್ಧಾಂತ ಇಲ್ಲ. ಅವರು ಎಲ್ಲಾ ಪಕ್ಷಗಳನ್ನ ಬದಲಾಯಿಸಿದ್ದಾರೆ. ಈ ಕಾರಣ ಜನ ಇಂಡಿ ಒಕ್ಕೂಟದ ಪರ ಮತ ಹಾಕುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಗ್ಯಾರೆಂಟಿಗಳನ್ನೇ ನಿತೀಶ್ ಕುಮಾರ್ ಅಲ್ಲಿ ಘೋಷಣೆ ಮಾಡಿದ್ದಾರೆ. ಆದರೂ ಅಲ್ಲಿಯ ಜನ ಅವರನ್ನ ಕೈ ಹಿಡಿಯುವುದಿಲ್ಲ. ಕರ್ನಾಟಕದಲ್ಲಿ ಬಿಹಾರದ ಮತದಾರರು ಇದ್ದಾರೆ. ಅವರಿಗೂ ನಮ್ಮ ಒಕ್ಕೂಟಕ್ಕೆ ಮತ ಹಾಕಿ ಎಂದು ಕೇಳುತ್ತೇವೆ ಎಂದು ತಿಳಿಸಿದರು.



ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ನಿಮಿಷಾಂಬ ದೇವಿಯ 67ನೇ ವಾರ್ಷಿಕ ಮಹೋತ್ಸವದ ಪ್ರಯುಕ್ತ ಸೋಮವಾರ ದಾವಣಗೆರೆ ನಗರದ ರಾಜಬೀದಿಗಳಲ್ಲಿ ಶ್ರೀ ನಿಮಿಷಾಂಬ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು.

## ತೆಲಂಗಾಣ: ಬಸ್‌ಗೆ ಜಲ್ಲಿಕಲ್ಲು ತುಂಬಿದ್ದ ಟ್ರಕ್ ಡಿಕ್ಕಿ; ಸಾವಿನ ಸಂಖ್ಯೆ 24ಕ್ಕೆ ಏರಿಕೆ

ಹೈದರಾಬಾದ್: ತೆಲಂಗಾಣ ರಾಜ್ಯದ ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾ ಬಳಿಯ ಮಿರ್ಜಗುಡದಲ್ಲಿ ಹೈದರಾಬಾದ್-ಬಿಜಾಪುರ ಹೆದ್ದಾರಿಯಲ್ಲಿ ಸಂಭವಿಸಿದ ಬಸ್-ಲಾರಿ ನಡುವಿನ ಅಪಘಾತದಲ್ಲಿ ಮೃತರ ಸಂಖ್ಯೆ 24ಕ್ಕೆ ಏರಿಕೆಯಾಗಿದ್ದು, ಘಟನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಮೋದಿಯವರು, ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಜೀವಹಾನಿ ತೀವ್ರ ದುಃಖ ತಂದಿದೆ. ಈ ಕಷ್ಟದ ಸಮಯದಲ್ಲಿ ಸಂತ್ರಸ್ತರು ಮತ್ತು ಅವರ ಕುಟುಂಬಗಳಿಗೆ ತೀವ್ರ ಸಂತಾಪ ಸೂಚಿಸುತ್ತೇನೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆಂದು ಹೇಳಿದ್ದಾರೆ.

ಇದೇ ವೇಳೆ ಮೃತರ ಕುಟಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ 2 ಲಕ್ಷ ರೂ ಹಾಗೂ ಗಾಯಾಳುಗಳಿಗೆ 50,000 ರೂ ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾದ ಮಿರ್ಜಾಗುಡ ಗ್ರಾಮದ ಬಳಿ ಈ ದುರ್ಘಟನೆ ಸಂಭವಿಸಿದೆ. (3ನೇ ಪುಟಕ್ಕೆ)

## ಎಲ್ಲರೂ ಪರಮಾಣು ಪರೀಕ್ಷೆ ಮಾಡ್ತಿದ್ದಾರೆ ನಾನೇಕೆ ಮಾಡಬಾರದು?: ಟ್ರಂಪ್ ಪ್ರಶ್ನೆ



ವಾಷಿಂಗ್ಟನ್: ಪಾಕಿಸ್ತಾನ ಚೀನಾ, ರಷ್ಯಾ, ಉತ್ತರ ಕೊರಿಯಾ ದೇಶಗಳು ಪರಮಾಣು ಪರೀಕ್ಷೆಗಳನ್ನು ನಡೆಸುತ್ತಿವೆ. ಹೀಗಿರುವಾಗ ಅಮೆರಿಕ ಮಾತ್ರ ಸಂಯಮ ತೋರಿಸುವ ದೇಶವಾಗಿ ಉಳಿಯಲು ಸಾಧ್ಯವಿಲ್ಲ. ನಾವೂ ಪರಮಾಣು ಪರೀಕ್ಷೆಗಳನ್ನು ನಡೆಸುತ್ತೇವೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿರುವ ಟ್ರಂಪ್, ವಿಶ್ವದಾದ್ಯಂತ ಅನೇಕ ದೇಶಗಳು ಪರ ಮಾಣು ಬಾಂಬ್‌ಗಳನ್ನ ಪರೀಕ್ಷಿಸುತ್ತಿವೆ. ರಷ್ಯಾ, ಚೀನಾ, ಉತ್ತರ ಕೊರಿಯಾ, ಪಾಕಿಸ್ತಾನ ಕೂಡ ಈ ಕೆಲಸದಲ್ಲಿ ನಿರತವಾಗಿವೆ. ಆದ್ರೆ ಯಾರೂ ಅದರ ಬಗ್ಗೆ ಮಾತನಾಡ್ತಿಲ್ಲ. ಆದ್ರೆ ನಮ್ಮದು ಮುಕ್ತ ಸಮಾಜ, ಎಲ್ಲವನ್ನೂ ಮಾತನಾಡ್ತೀವಿ. ಇಲ್ಲದಿದ್ರೆ ನೀವು ನಾಳೆ ಹೇಳಿದ್ದನ್ನೂ ಮೀರಿ ವರದಿ ಮಾಡ್ತೀರಿ ಎಂದು ಪತ್ರಕರ್ತರಿಗೆ ಹೇಳಿದ್ದಾರೆ.

ಅವರೆಲ್ಲರೂ ನ್ಯೂಕ್ಲಿಯರ್ ಪರೀಕ್ಷೆ ನಡೆಸುತ್ತಿದ್ದಾರೆ. ಆದ್ರೆ ಇತರ ಎಲ್ಲಾ ದೇಶಗಳಿಗಿಂತ ಅಮೆರಿಕ ಹೆಚ್ಚು ಪರಮಾಣು ಶಸ್ತ್ರಾಸ್ತ್ರಗಳನ್ನ ಹೊಂದಿದೆ. ಇಡೀ ಜಗತ್ತನ್ನು 150 ಬಾರಿ ಸ್ಫೋಟಿಸುವಷ್ಟು ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ನಾವು ಹೊಂದಿದ್ದೇವೆ. ಪುಟಿನ್ ಮತ್ತು ಕ್ಸಿ ಜಿನ್‌ಪಿಂಗ್ ಇಬ್ಬರೊಂದಿಗೂ ಈ ವಿಷಯ ಚರ್ಚಿಸಿದ್ದೇನೆ. ಆದಾಗ್ಯೂ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಪರಿಸ್ಥಿತಿ ಅನುಗುಣವಾಗಿ ನಾವು ನಿರ್ಧಾರ ಕೈಗೊಳ್ಳಲಿದ್ದೇವೆ ಎಂದಿದ್ದಾರೆ ಟ್ರಂಪ್.

ನ್ಯೂಕ್ಲಿಯರ್ ಪರೀಕ್ಷೆಗೆ ನಿರ್ದೇಶನ: ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗಿನ ತಮ್ಮ ನಿಗದಿತ ಸಭೆಗೂ ಮುಂಚೆಯೇ ಟ್ರಂಪ್ ಟ್ರುತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿ, ರಕ್ಷಣಾ ಇಲಾಖೆಗೆ ತಕ್ಷಣ ಪರಮಾಣು ಪರೀಕ್ಷೆ ಪ್ರಾರಂಭಿಸಲು ನಿರ್ದೇಶಿಸಿದ್ದರು. ಬಳಿಕ ಸಂದರ್ಶನದಲ್ಲಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

## ಕೆಲಸ ಕೊಡಿಸುವುದಾಗಿ ನಿರುದ್ಯೋಗಿ ಯುವಕರಿಗೆ ಲಕ್ಷಾಂತರ ರೂ ವಂಚನೆ

ದಾ ನಗರವಾಣಿ ಸುದ್ದಿ

ದಾವಣಗೆರೆ.ನ.3: ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ನಿರುದ್ಯೋಗಿ ಯುವಕರಿಂದ ಲಕ್ಷಾಂತರ ರೂ. ಹಣ ಪಡೆದು ವಂಚನೆ ಮಾಡಿದ ಪ್ರಕರಣ ದಾವಣಗೆರೆಯಲ್ಲಿ ನಡೆದಿದೆ.

ವ್ಯಕ್ತಿಯೊಬ್ಬ ತಾನು ವಕೀಲ ಎಂದು ಹೇಳಿಕೊಂಡು ಹತ್ತಾರು ಯುವಕರಿಗೆ ಜಲಸಂಪನ್ಮೂಲ ಇಲಾಖೆಯಲ್ಲಿ 4 ಲಕ್ಷ ಹಣ ಕೊಟ್ರೆ "ಸಿ" ಮತ್ತು "ಡಿ" ಗ್ರೂಪ್ ಹುದ್ದೆ ಕೊಡಿಸುವುದಾಗಿ ನಂಬಿಸಿ ಹಣ ತೆಗೆದುಕೊಂಡಿದ್ದಾನೆ. ಸ್ವಲ್ಪ ದಿನಗಳ ನಂತರ ಹಣ ನೀಡಿದ ಯುವಕರು ಆ ವ್ಯಕ್ತಿ ಬಳಿ ಕೆಲಸ ಕೊಡಿಸುವಂತೆ ಒತ್ತಾಯ ಮಾಡಿದ್ದರು ಎನ್ನಲಾಗಿದೆ.

ನಂತರ ಆ ವ್ಯಕ್ತಿ ಜಲಸಂಪನ್ಮೂಲ ಇಲಾಖೆ ಹೆಸರಲ್ಲಿ ಸೀಲು, ಸಹಿ ಮಾಡಿ ಅಕ್ರಮವಾಗಿ ನಕಲಿ ಆದೇಶ ಪತ್ರ ನೀಡಿದ್ದಾನೆ. ಇದರಿಂದ ಸಂತಸಗೊಂಡ ಯುವಕರು ಸಿಹಿ ಹಂಚಿ ಸಂಭ್ರಮಿಸಿ, ಆದೇಶ ಪತ್ರದಂತೆ ಕೆಲಸಕ್ಕೆ ಸೇರಿಕೊಳ್ಳಲು ಹೋಗಿದ್ದಾರೆ. ಆಗ ಈ ಆದೇಶ ಪತ್ರಗಳು ನಕಲಿ ಎಂದು ತಿಳಿದಿದೆ.

ಈ ಬಗ್ಗೆ ಆ ವ್ಯಕ್ತಿಗೆ ಯುವಕರು ಕರೆ (ನೇ ಪುಟಕ್ಕೆ)

## ಉದ್ವೇಗ ಬೇಡ; ಬಿಜೆಪಿಗರಿಗೆ ಆರ್‌ಎಸ್‌ಎಸ್ ನೀತಿಪಾಠ

ಬೆಂಗಳೂರು: ಆತುರದ, ಉದ್ವೇಗದ ಹೇಳಿಕೆ ನೀಡಿ ಕಾಂಗ್ರೆಸ್ ಜಾಲದಲ್ಲಿ ಸಿಕ್ಕಿಬೀಳಬೇಡಿ ಎಂದು ಆರ್‌ಎಸ್‌ಎಸ್ ಬಿಜೆಪಿ ನಾಯಕರಿಗೆ ಸೂಚಿಸಿದೆ.

ಪಥ ಸಂಚಲನ ಜಟಾಪಟಿ ನಡುವೆ ಇಂದು ಬಿಜೆಪಿ ನಾಯಕರ ಜೊತೆ ಆರ್‌ಎಸ್‌ಎಸ್ ಮಹತ್ವದ ಬೈಠಕ್ ನಡೆಸಿತು.ಆರ್‌ಎಸ್‌ಎಸ್ ಮುಖಂಡರಾದ ತಿಪ್ಪೇಸ್ವಾಮಿ, ರಘುನಂದನ್, ವಾದಿರಾಜ್ ಬಿಜೆಪಿ ನಾಯಕರಾದ ಆರ್.ಅಶೋಕ್, ವಿಜಯೇಂದ್ರ, ಸಿ.ಟಿ ರವಿ, ಛಲವಾದಿ ನಾರಾಯಣಸ್ವಾಮಿ, ಅಶ್ವಥ್ ನಾರಾಯಣ, ಸಂಸದರಾದ ಬೊಮ್ಮಾಯಿ, ಬ್ರಿಜೇಶ್ ಚೌಟ, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಜನಾರ್ದನ ರೆಡ್ಡಿ ಸೇರಿ ಹಲವು ಶಾಸಕರು, ಮುಖಂಡರು ಭಾಗಿಯಾಗಿದರು. (2ನೇ ಪುಟಕ್ಕೆ)

## ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಚಾಲನೆ



ದಾ ನಗರವಾಣಿ ಸುದ್ದಿ

ದಾವಣಗೆರೆ.ನ.3; ಜಿಲ್ಲಾ ಪಂಚಾಯತ್ ದಾವಣಗೆರೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 8ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಸೋಮವಾರ ತಮ್ಮ ಗೃಹಕಚೇರಿಯಲ್ಲಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಲುಬಾಯಿ ರೋಗವು ವೈರಾಣುವಿನಿಂದ ಹರಡುವ ಸಾಂಕ್ರಾಮಿಕ ರೋಗವಾಗಿದೆ.ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುವ, ಕಾಲುಬಾಯಿ ರೋಗವನ್ನು ನಿಯಂತ್ರಿಸಿ ನಿರ್ಮೂಲನೆ ಮಾಡಲು ಪ್ರತಿ 6 ತಿಂಗಳಿಗೊಮ್ಮೆ ರೋಗದ ವಿರುದ್ಧ ಲಸಿಕೆ ಹಾಕಿಸಬೇಕು ಎಂದು ಸಲಹೆ ನೀಡಿದರು.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರೈತರ ಎಲ್ಲಾ ದನ, ಎಮ್ಮೆ ಮತ್ತು ಕರುಗಳಿಗೆ ಉಚಿತವಾಗಿ ನೀಡುವ ಲಸಿಕಾ ಕಾರ್ಯಕ್ರಮವನ್ನು (3ನೇ ಪುಟಕ್ಕೆ)

## ಅಶ್ಲೀಲ ಚಿತ್ರ ನಿಷೇಧದ ಬಗ್ಗೆ ನೇಪಾಳದಲ್ಲಿ ಏನಾಯಿತು ಗೊತ್ತಿಲ್ಲವೆ? ಎಂದ ಸುಪ್ರೀಂ ಕೋರ್ಟ್

ನವದೆಹಲಿ: ಅಶ್ಲೀಲ ಚಿತ್ರಗಳನ್ನು ನಿಷೇಧಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಲು ತಾನು ಒಲವು ಹೊಂದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ನಡೆದ ಜೆನ್ ಝೀ ಪ್ರತಿಭಟನೆಗಳನ್ನು ಉಲ್ಲೇಖಿಸಿರುವ ಸುಪ್ರೀಂ ಕೋರ್ಟ್, "ಸಾಮಾಜಿಕ ಜಾಲತಾಣಗಳ ನಿಷೇಧದ ಬಳಿಕ ಯುವಕರು ಭ್ರಷ್ಟ ಆಡಳಿತವನ್ನು ಉರುಳಿಸಲು ಹಿಂಸಾತ್ಮಕ ಆಂದೋಲನಗಳನ್ನು ನಡೆಸಿದಾಗ "ನೇಪಾಳದಲ್ಲಿ ನಿಷೇಧದ ವಿರುದ್ಧ ಏನಾಯಿತು ನೋಡಿ" ಎಂದು ಹೇಳಿದೆ.

ಆದಾಗ್ಯೂ, ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ವಿಭಾಗೀಯ ಪೀಠ ನಾಲ್ಕು ವಾರಗಳ ನಂತರ ಅರ್ಜಿಯನ್ನು ವಿಚಾರಣೆಗೆ ಒಳಪಡಿಸುವುದಾಗಿ ಹೇಳಿದೆ. ಮುಖ್ಯ ನ್ಯಾಯಮೂರ್ತಿ ಗವಾಯಿ ನವೆಂಬರ್ 23 ರಂದು ಅಧಿಕಾರದಿಂದ ಕೆಳಗಿಳಿಯಲಿದ್ದಾರೆ.

ಅಶ್ಲೀಲ ಚಿತ್ರಗಳನ್ನು ನೋಡುವುದನ್ನು ತಡೆಯಲು, ವಿಶೇಷವಾಗಿ ಇನ್ನೂ ವಯಸ್ಸನ್ನು ತಲುಪದವರಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಅಂತಹ ಯಾವುದೇ ವಿಷಯವನ್ನು ನೋಡುವುದನ್ನು ನಿಷೇಧಿಸಲು ರಾಷ್ಟ್ರೀಯ ನೀತಿಯನ್ನು ರೂಪಿಸಲು ಮತ್ತು ಕ್ರಿಯಾ ಯೋಜನೆಯನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ಅರ್ಜಿದಾರರು ಮನವಿ ಮಾಡಿದ್ದರು.

"ಡಿಜಿಟಲೀಕರಣದ ನಂತರ, ಎಲ್ಲರೂ ಡಿಜಿಟಲ್ ಆಗಿ ಸಂಪರ್ಕ ಹೊಂದಿದ್ದಾರೆ. ಯಾರು ವಿದ್ಯಾವಂತರು ಅಥವಾ ಅವಿದ್ಯಾವಂತರು ಎಂಬುದು ಮುಖ್ಯವಲ್ಲ. ಎಲ್ಲವೂ ಒಂದೇ ಕ್ಲಿಕ್‌ನಲ್ಲಿ ಲಭ್ಯವಿದೆ" ಎಂದು ಅರ್ಜಿದಾರರು ಹೇಳಿದ್ದರು.

ಅಶ್ಲೀಲ ವಸ್ತುಗಳನ್ನು ಪ್ರಚಾರ ಮಾಡುವ "ಶತಕೋಟಿ" ಸೈಟ್‌ಗಳು ಇಂಟರ್ನೆಟ್‌ನಲ್ಲಿ ಲಭ್ಯವಿದೆ ಎಂದು ಸರ್ಕಾರ ಒಪ್ಪಿಕೊಂಡಿದೆ ಎಂದು ಅರ್ಜಿದಾರರು ಕೋರ್ಟ್ ಗಮನ ಸೆಳೆದಿದ್ದಾರೆ. "ಕೋವಿಡ್ ಸಮಯದಲ್ಲಿ ಶಾಲಾ ಮಕ್ಕಳು ಡಿಜಿಟಲ್ ಸಾಧನಗಳನ್ನು ಬಳಸಿದ್ದಾರೆ. ಈ ಸಾಧನಗಳಲ್ಲಿ ಅಶ್ಲೀಲ ಚಿತ್ರಗಳನ್ನು ನೋಡುವುದನ್ನು (3ನೇ ಪುಟಕ್ಕೆ)

## ಸತೀಶ್ ಜಾರಕಿಹೊಳಿ ದಿಢೀರ್ ದೆಹಲಿಗೆ: ಕುತೂಹಲ

ಬೆಂಗಳೂರು: ನವೆಂಬರ್ ಕ್ರಾಂತಿ..ನಾಯಕತ್ವ ಬದಲಾವಣೆ ಕುರಿತು ಸದ್ದು ಗದ್ದಲದ ನಡುವಲ್ಲೇ ಸಚಿವ ಸತೀಶ್ ಜಾರಕಿಹೊಳಿಯವರು ದಿಢೀರ್ ನವದೆಹಲಿಗೆ ತೆರೆಳುತ್ತಿದ್ದು, ಈ ಭೇಟಿ ರಾಜ್ಯ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ದೆಹಲಿಗೆ ತೆರಳುತ್ತಿರುವ ಸತೀಶ್ ಜಾರಕಿಹೊಳಿಯವರು, ಮೂರು ದಿನಗಳ ಕಾಲ ಅಲ್ಲಿಯೇ ತಂಗಲಿದ್ದಾರೆ. ಈ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆಂದು ತಿಳಿದುಬಂದಿದೆ.

(4ನೇ ಪುಟಕ್ಕೆ)

## ಹಲ್ಲೆ ನಡೆಸಿ ದರೋಡೆ: ಕೆಲವೇ ಗಂಟೆಗಳಲ್ಲಿ ಆರೋಪಿಗಳ ಬಂಧನ; ಹಣ ವಶ

ದಾ ನಗರವಾಣಿ ಸುದ್ದಿ

ಹರಿಹರ: ಹಲ್ಲೆ ನಡೆಸಿ ದರೋಡೆ ಮಾಡಿದ್ದ 6 ಜನ ಆರೋಪಿಗಳನ್ನು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಬಂಧಿಸಿ, ದರೋಡೆ ಮಾಡಿದ ಹಣವನ್ನು ಜಪ್ತಿ ಮಾಡುವಲ್ಲಿ ಇಲ್ಲಿನ ಗ್ರಾಮಾಂತರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಎ.ಕೆ.ಕಾಲೊನಿ ನಿವಾಸಿಗಳಾದ ವಿಷ್ಣು, ಹನುಮಂತ, ಅಮಿತ್, ಅಜಯ್ ದಾವಣಗೆರೆಯ ಅಜಿತ್ ಮತ್ತು ಕಿರಣ್ ಬಂಧಿತ ಆರೋಪಿಗಳು.

ವಿವರ: ಹರಿಹರದ ವಿಜಯನಗರ ಬಡಾವಣೆ ವಾಸಿ ಪ್ರಶಾಂತ್ ಎಂಬುವರು ಕೊಂಡಜ್ಜಿ ಗ್ರಾಮದ ಸಮೀಪ ನಾಗಪುರ ಕ್ರಾಸ್ ಬಳಿ ಪ್ರಶಾಂತ್ ಬಾರ್ ಮತ್ತು ರೆಸ್ಟೋರೆಂಟ್ ನಡೆಸುತ್ತಿದ್ದಾರೆ. ಕಾಲೇಜಿಗೆ ರಜೆ ಇದೆ ಎಂದು ಪ್ರಶಾಂತ್ ಅವರ ಪುತ್ರ ಬಿಸಿಎ ವಿದ್ಯಾರ್ಥಿ ಆದಿತ್ಯ (19) ಭಾನುವಾರ ಬಾರ್ ನಿರ್ವಹಣೆಗೆ ಹೋಗಿದ್ದರು.

ರಾತ್ರಿ 10ಕ್ಕೆ ಬಾರ್ ಬಂದ್ ಮಾಡಿ ವ್ಯಾಪಾರದ ರೂ.67,000 ಹಣ ತಮ್ಮ ಬೈಕಿನ ಡಿಕ್ಕಿಯಲ್ಲಿಟ್ಟುಕೊಂಡು ಹರಿಹರದ ಕಡೆ ಸಾಗಿದ್ದರು. ಪೊಲೀಸ್ ಪಬ್ಲಿಕ್ ಸ್ಕೂಲ್ ಬಳಿ ಬಂದಾಗ ತನ್ನನ್ನು ಬೈಕುಗಳಲ್ಲಿ ಕೆಲವರು ಬೆನ್ನಟ್ಟಿರುವುದು ಅರಿವಿಗೆ ಬಂದಿದೆ.

ಬೈಕ್ ಓಡಿಸತ್ತಲೆ ತಮ್ಮ ಬಾರ್ ಎದುರಿನ ಪೆಟ್ರೋಲ್ ಪಂಪ್‌ನ ಪಾಪಣ್ಣ ಮತ್ತು ಕೊಂಡಜ್ಜಿಯ ಸತೀಶ್ ಎಂಬುವರಿಗೆ ಈ ವಿಷಯ ತಿಳಿಸಿದ್ದಾರೆ. ಬೈಕನ್ನು ವೇಗವಾಗಿ ಓಡಿಸುತ್ತಾ ಸಾಗುತ್ತಿರುವಂತೆಯೆ ಆರೋಪಿಗಳು ಆದಿತ್ಯನ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ.

ಹೇಗೋ ಸಂಭಾಳಿಸಿಕೊಂಡು ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಬಳಿ ಬಂದಾಗ ಆರೋಪಿಗಳು ಬೈಕನ್ನು ಅಡ್ಡಗಟ್ಟಿದ್ದಾರೆ. ಓರ್ವ ಆರೋಪಿ ಕಬ್ಬಿಣದ ರಾಡಿನಿಂದ ಆದಿತ್ಯನ ತಲೆಗೆ, ಮತ್ತೊಬ್ಬ ಆರೋಪಿ ಯಾವುದೋ ಕಬ್ಬಿಣದ ಅಸ್ತ್ರದಿಂದ ಮುಖಕ್ಕೆ ಹಲ್ಲೆ ಮಾಡಿದ್ದಾರೆ.

(2ನೇ ಪುಟಕ್ಕೆ)

## ಹರಪನಹಳ್ಳಿ ಪಟ್ಟಣ ಸೌಂದರ್ಯೀಕರಣಕ್ಕೆ ಸರ್ವರೂ ಸಹಕರಿಸಿ: ಶಾಸಕಿ ಎಂಪಿ ಲತಾ



ದಾ ನಗರವಾಣಿ ಸುದ್ದಿ

ಹರಪನಹಳ್ಳಿ: ಪಟ್ಟಣದ ಸೌಂದರ್ಯೀಕರಣಕ್ಕೆ ಪುರಸಭಾ ಸದಸ್ಯರೂ ಸೇರಿದಂತೆ ಸರ್ವರೂ ಸಹಕರಿಸಿ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಕರೆ ನೀಡಿದರು.

ಅವರು ಪಟ್ಟಣದ ಹಳೆ ತಾಲೂಕು ಕಚೇರಿ ನಿವೇಶನದಲ್ಲಿ ಪುರಸಭಾ ಕಚೇರಿಯ ನೂತನ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಭೂಮಿ ಪೂಜೆ ನೆರವೇರಿಸಿ ಸೋಮವಾರ ಮಾತನಾಡಿದರು. ಬೀದಿ ಬದಿ ಇರುವ ಗೂಡಂಗಡಿಗಳನ್ನು ತೆರವುಗೊಳಿಸಿ ಸುಂದರ ಗೊಳಿಸಬೇಕಾಗಿದೆ ಎಂದರು.

ಗೂಡಂಗಡಿ, ಡಬ್ಬ ಅಂಗಡಿ ಮಾಲಿಕರು ತಳ್ಳುವ ಗಾಡಿಯಲ್ಲಿ ಬೆಳಿಗ್ಗೆ ಬಂದು ವ್ಯಾಪಾರ ಮಾಡಿಕೊಂಡು ಸ್ವಚ್ಚತೆ ಗೊಳಿಸಿ ವಾಪಾಸು ಮನೆಗೆ ತೆರಳಬೇಕು, ಕೈ ಗಾಡಿಗಳನ್ನು ಇಟ್ಟು ವ್ಯಾಪಾರ ಮಾಡಲು ಪ್ರತ್ಯೇಕ ವಿಂಡ್ಸ್ ಸ್ಟ್ರೀಟ್ ಮಾಡಿಕೊಡಲಾಗುವುದು ಎಂದು ಹೇಳಿದರು.

ಹರಪನಹಳ್ಳಿ ಪಟ್ಟಣ ಸೇರಿದಂತೆ ತಾಲೂಕಿನ ಸರ್ವತೋಮುಖ ಅಭಿವೃದ್ದಿಗೆ ಶ್ರಮಿಸುವೆ, ನಿಮ್ಮಗಳ ಸಹಕಾರ ಬೇಕು ಎಂದು ಹೇಳಿದರು.

ಪುರಸಭಾ ಹಿರಿಯ ಸದಸ್ಯ ಎಂ.ವಿ. ಅಂಜಿನಪ್ಪ ಮಾತನಾಡಿ ಹರಪನಹಳ್ಳಿ ಪಟ್ಟಣದಲ್ಲಿ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ಹಾಗೂ ಅಲ್ಪಸಂಖ್ಯಾತರೇ ಹೆಚ್ಚು ಇದ್ದು, ಹಿಂದಿನ ಶಾಸಕರು ತಕ್ಕ ಮಟ್ಟಿಗೆ ಕೆಲಸ ಮಾಡಿದ್ದಾರೆ, ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ರವರು ಸಹ ಅನೇಕ ಅಭಿವೃದ್ದಿ ಕೆಲಸ ಮಾಡಿದರು, ಈಗಿನ ಶಾಸಕಿ ಎಂ.ಪಿ.ಲತಾ ಅವರು ಸಹ 80 ಲಕ್ಷ ದಲ್ಲಿ ನೂತನ ಡಿವೈಡರ್ ನಿರ್ಮಿಸಿ ದೀಪ ಅಳವಡಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಹರಪನಹಳ್ಳಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿದ್ದಾರೆ, ಅಯ್ಯನ ಕೆರೆ ಪುನರುಜ್ಜೀವನ ಕಾಮಗಾರಿ 80 ಲಕ್ಷಗಳಲ್ಲಿ ಆಗುತ್ತದೆ ಹರಪನಹಳ್ಳಿ ಪಟ್ಟಣಕ್ಕೆ ತುಂಗಭದ್ರ ನದಿ ನೀರು ಸರಬರಾಜು ಎರಡನೇ ಹಂತದ ಯೋಜನೆ ಮಂಜೂರಾತಿ ಆಗಿದೆ ಎಂದು ಹೇಳಿದರು. (3ನೇ ಪುಟಕ್ಕೆ)

## ಪಾಕಿಸ್ತಾನಕ್ಕೆ ಭಾರತದ ಪರಮಾಣು ಶಸ್ತ್ರಾಸ್ತ್ರಗಳ ಡೇಟಾ ರವಾನೆ; ಬಂಧನ

ಮುಂಬೈ: ಬಾಬಾ ಪರಮಾಣು ಸಂಶೋಧನಾ ಕೇಂದ್ರದ ವಿಜ್ಞಾನಿ ಎಂದು ಹೇಳಿಕೊಂಡು ಸೂಕ್ಷ್ಮ ಪರಮಾಣು ದತ್ತಾಂಶ ವಿನಿಮಯಕ್ಕಾಗಿ ಕೋಟ್ಯಂತರ ವಿದೇಶಿ ಹಣವನ್ನು ಪಡೆದಿದ್ದಕ್ಕಾಗಿ 60 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ.

ವಿಜ್ಞಾನಿ ಎಂದು ಸುಳ್ಳು ಹೇಳಿಕೊಂಡು ದೇಶಾದ್ಯಂತ ಪ್ರಯಾಣಿಸಿದ್ದಕ್ಕಾಗಿ ಅಖ್ತರ್ ಹುಸೇನಿ ಅವರನ್ನು ಕಳೆದ ತಿಂಗಳು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಜಾರ್ಖಂಡ್‌ನ (4ನೇ ಪುಟಕ್ಕೆ)

ನಗರವಾಣಿ
ಅಕೌಂಟೆಂಟ್/ಮ್ಯಾನೇಜರ್ ಬೇಕಾಗಿದ್ದಾರೆ
ದಾವಣಗೆರೆ ನಗರವಾಣಿ ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಲು ಅಕೌಂಟೆಂಟ್ ಕಂ ಮ್ಯಾನೇಜರ್ ಬೇಕಾಗಿದ್ದಾರೆ. ವಿದ್ಯಾರ್ಹತೆ: ಬಿಕಾಂ, ಟ್ಯಾಲಿ, ಕಂಪ್ಯೂಟರ್ ಜ್ಞಾನ ಅತ್ಯವಶ್ಯಕ. ಪುರುಷರಿಗೆ ಆದ್ಯತೆ. ಸಂಪರ್ಕಿಸಿ.
ನಗರವಾಣಿ ಕಚೇರಿ
ಹೋಟೆಲ್ ಶಾಂತಿ ಪಾರ್ಕ್ ಆವರಣ, ಅಶೋಕ ರಸ್ತೆ, ದಾವಣಗೆರೆ.

# ಸಮಾಜಮುಖಿಯಾಗಿ ಪುಣ್ಯತಿಥಿ ಕಾರ್ಯಕ್ರಮ



ದಾ ನಗರವಾಣಿ ಸುದ್ದಿ

ಜಗಳೂರು, ಅ.31: ಪುಣ್ಯತಿಥಿ ಸಮಾಜಮುಖಿ ಕಾರ್ಯಕ್ರಮವಾಗಿ ಗ್ರಾಮದ ಹಿರಿಮೆ ಹೆಚ್ಚಿಸಿದೆ ಎಂದು ನಿವೃತ್ತ ಡಿವೈಎಸ್ ಪಿ ಜಯರಾಮ್ ಹೇಳಿದರು.

ತಾಲೂಕಿನ ತಮಲೇಹಳ್ಳಿ ಗ್ರಾಮದಲ್ಲಿ ಗಿರಿಜಾ ಸಭಾಭವನದಲ್ಲಿ ದಂಡಿನ ರಾಜಪ್ಪ ಅವರ 5 ನೇ ವರ್ಷದ ಪುಣ್ಯ ಸ್ಮರಣೆಯ ಅಂಗವಾಗಿ ಉದ್ಘಾಟನೆ ನೆರವೇರಿಸಿ ಮಾತನಾಡಿದರು

ಅರಣ್ಯ ಇಲಾಖೆ ಹೆಚ್ಚುವರಿ ಅಧೀಕ್ಷಕರಾದ ಡಾ.ಶಿವಕುಮಾರ ದಂಡಿನ ಅವರು ಉತ್ತಮಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸುವ ಮೂಲಕ ಪೋಷಕರಿಗೆ ಕೀರ್ತಿ ತರುವುದಲ್ಲದೆ, ಸ್ವಗ್ರಾಮದಲ್ಲಿ ನೌಕರರ ಸಂಘವನ್ನು ಕಟ್ಟಿ ಗ್ರಂಥಾಲಯ ತೆರೆದ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಮೂಲಕ ಬಡಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದು ಸಂವಿಧಾನದ ಆಶಯಗಳ ಸಾಕಾರಗೊಳಿಸುತ್ತಿದ್ದಾರೆ ಎಂದರು.

ಮಂಡ್ಯದ ಜಿಲ್ಲೆಯ ನಿವೃತ್ತ ನ್ಯಾಯಾಧೀಶ ಬಸವನಕೆರೆ ಶಿವರಾಮೇಗೌಡ ಮಾತನಾಡಿ, ತಂದೆ ತಾಯಿಯವರ ಪುಣ್ಯ ತಿಥಿ ಎಂದರೆ ಗೋಕರ್ಣ ಸೇರಿದಂತೆ ವಿವಿಧ ಧಾರ್ಮಿಕ ಸ್ಥಳಗಳಲ್ಲಿ ಪೂಜೆ, ಹೋಮಗಳ ಮೊರೆ ಹೋಗುವ ಇಂದಿನ ಕಾಲಘಟ್ಟದಲ್ಲಿ ಉಚಿತ ಹೊಲಿಗೆ ಯಂತ್ರ ಕೌಶಲ್ಯಾಧಾರಿತ ತರಬೇತಿ, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಸುತ್ತಿರುವ ಡಾ.ಶಿವಕುಮಾರ್ ಅವರ ತಂದೆ ತಾಯಿಯ ಹೆಸರು ಸಮಾಜದಲ್ಲಿ ಉತ್ತುಂಗಕ್ಕೇರಿದೆ ಎಂದು ತಿಳಿಸಿದರು.

ಉನ್ನತ ಮಟ್ಟದ ಅಧಿಕಾರಿ ಗ್ರಾಮಕ್ಕೆ ಆಸ್ತಿಯಿದ್ದಂತೆ, ಭವಿಷ್ಯದ ಪೀಳಿಗೆಗೆ ಇತಿಹಾಸವಾಗುತ್ತದೆ. ಪೋಷಕರು ನಿರ್ದಿಷ್ಟ ಕನಸಿನೊಂದಿಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣಕೊಡಿಸಿ ಉನ್ನತ ಹುದ್ದೆ ಅಲಂಕರಿಸಲು ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಚಿತ್ರದುರ್ಗದ ಅರಣ್ಯ ಇಲಾಖೆ ಹೆಚ್ಚುವರಿ ಅಧೀಕ್ಷಕ ಡಾ. ಶಿವಕುಮಾರ್ ಮಾತನಾಡಿ, ನಾನು ಬಾಲ್ಯದಿಂದ ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸಲು ನನ್ನ ತಂದೆ ತಾಯಿಯ ಪರಿಶ್ರಮ, ಪ್ರೋತ್ಸಾಹ ಕಾರಣ. ಗ್ರಾಮದ ಸಮಗ್ರ ಅಭಿವೃದ್ಧಿಗೆ ಶಿಕ್ಷಣವೇ ಆಧಾರವಾಗಿದೆ. ನನ್ನಂತೆ ಇತರರ ಮಕ್ಕಳೂ ಶಿಕ್ಷಣ, ಉದ್ಯೋಗ ಗಳಿಸಿ ಗ್ರಾಮಕ್ಕೆ ಕೀರ್ತಿ ತರಬೇಕು ಎಂಬುದು ನನ್ನ ಆಶಯವಾಗಿದೆ. ಪೋಷಕರು ತಮ್ಮಮಕ್ಕಳನ್ನು ಮೊಬೈಲ್ ನಿಂದ ದೂರವಿಡಬೇಕು ಎಂದು ಕಿವಿ ಮಾತು ಹೇಳಿದರು.

ಲೋಕಾಯುಕ್ತ ಇಲಾಖೆ ನಿವೃತ್ತ ಅಧಿಕಾರಿಗಳಾದ ಪ್ರಹ್ಲಾದ್ , ಶಿವಲಿಂಗೇಗೌಡ ಮಾತನಾಡಿದರು.

ಇದೇ ವೇಳೆ ಟ್ರಸ್ಟ್ ನಿಂದ ಉಚಿತ ಟೈಲರಿಂಗ್ ತರಬೇತಿ ಪಡೆದ ತಾಲ್ಲೂಕಿನ ಚಿಕ್ಕ ಉಜಿನಿ ಗ್ರಾಮದ 26 ಮಹಿಳೆಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. 7 ಜನ ಪೋತರಾಜರುಗಳಿಗೆ ಉಚಿತ ಪರಿಕರಗಳ ಕಿಟ್ ನೀಡಲಾಯಿತು. 4 ಸರ್ಕಾರಿ ಹುದ್ದೆ ಗಳಿಸಿದ ಸಾಧಕರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ದಂಡಿನ ಗಿರಿಜಮ್ಮ,ಲತಾ ಆರ್ ಖಜಾಂಚಿ. ಸಂಧ್ಯಾ, ಪ್ರಹ್ಲಾದ, ಗಾಯಿತ್ರಿ, ಹನುಮಂತಪ್ಪ, ಗ್ರಾಮಸ್ಥರು ಹಾಗೂ ಶಾಲಾ ಮಕ್ಕಳು ಸೇರಿದಂತೆ ಇತರರು ಇದ್ದರು.

# ಸಮುದಾಯ ಭವನಗಳು ಎಲ್ಲರಿಗೂ ಉಪಯೋಗವಾಗಲಿ: ಬಸವಂತಪ್ಪ ಸಲಹೆ



ದಾ ನಗರವಾಣಿ ಸುದ್ದಿ

ದಾವಣಗೆರೆ: ಸಮುದಾಯ ಭವನಗಳು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗದೆ ಎಲ್ಲಾ ಸಮುದಾಯಕ್ಕೂ ಉಪಯೋಗ ಆಗುವಂತಾಗಬೇಕೆಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಸಲಹೆ ನೀಡಿದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಅಣಜಿ ಗ್ರಾಮದಲ್ಲಿ ಭಾನುವಾರ ಸಾರ್ವಜನಿಕರ ಅನುಕೂಲಕ್ಕಾಗಿ 20 ಲಕ್ಷ ರೂ. ವೆಚ್ಚದ ವೀರಶೈವ ಸಮುದಾಯ ಭವನ, 12 ಲಕ್ಷ ರೂ. ವೆಚ್ಚದ ಕನಕ ಸಮುದಾಯ ಭವನ, 12 ಲಕ್ಷ ರೂ.ವೆಚ್ಚದ ಅಂಬಿಗರ ಚೌಡಯ್ಯ ಸಮುದಾಯ ಭವನ ಹಾಗೂ 5 ಲಕ್ಷ ರೂ. ವೆಚ್ಚದ ಗಣೇಶ ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಭವನ, ಶಾಲೆ, ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ ಮಾಡಲು ಜಾಗದ ಕೊರತೆ ಎದ್ದು ಕಾಣುತ್ತದೆ. ಕ್ಷೇತ್ರದ ಪ್ರತಿಯೊಂದು ಗ್ರಾಮಗಳಲ್ಲಿ ಇಂತಹ ಸಮಸ್ಯೆ ಉದ್ಭವಿಸುತ್ತದೆ. ಮೂರು ಸಮುದಾಯ ಭವನಗಳಿಗೆ ಅನುದಾನ ನೀಡಿ ಇಂದು ಭೂಮಿಪೂಜೆ ನೆರವೇರಿಸಲಾಗಿದೆ. ಅನುದಾನದ ಕೊರತೆಯಾದ-ರೆ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅನುದಾನ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸಮುದಾಯ ಭವನಗಳನ್ನು ಕೇವಲ ಸಮಾರಂಭಗಳಿಗೆ ಮಾತ್ರ ಸೀಮಿತಗೊಳಿಸದೆ, ಅವುಗಳನ್ನು ಸಮಾಜದ ವಿವಿಧ ಅಗತ್ಯಗಳಿಗಾಗಿ ಬಳಸಿಕೊಳ್ಳಬೇಕು. ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಸಭೆ-ಸಮಾರಂಭಗಳನ್ನು ಏರ್ಪಡಿಸಲು ಮತ್ತು ಇತರೆ ಸಮುದಾಯದ ಕಾರ್ಯಕ್ರಮಗಳನ್ನು ಆಯೋಜಿಸಲು ಇದನ್ನು ಬಳಸಬಹುದು. ಭವನಗಳು ಜನರನ್ನು ಒಗ್ಗೂಡಿಸಲು ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಲು ಸಹಾಯಕವಾಗುತ್ತವೆ. ಸಮುದಾಯದ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹಾರ ಕಂಡುಕೊಳ್ಳಲು ವೇದಿಕೆಯಾಗಿ ಬಳಸಬಹುದು ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ನಾಯಕ ಸಮಾಜದ ಮುಖಂಡ ಬಸವಲಿಂಗಪ್ಪ,ಸಂಗನ ಬಸಣ್ಣ, ವಿಎಸ್‌ಎಸ್‌ಎನ್ ಅಧ್ಯಕ್ಷ ನಾಗೇಂದ್ರಪ್ಪ, ತಾಪಂ ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ, ಮಾಜಿ ಸದಸ್ಯರಾದ ಬಸವರಾಜಪ್ಪ, ಪ್ರಕಾಶ್ ಪಾಟೀಲ್, ಕಾಂಗ್ರೆಸ್ ಮುಖಂಡ ರಾಜಪ್ಪ, ಶಿವಮೂರ್ತಿ, ಗುಡಾಳು ಗ್ರಾಪಂ ಮಾಜಿ ಅಧ್ಯಕ್ಷ ಲೋಕೇಶ್, ಗಿರಿಯಾಪುರ ಕೃಷ್ಣಮೂರ್ತಿ, ಹನುಮಂತಪ್ಪ, ಹುಲಿಕಟ್ಟೆ ಜವಾಹರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಣಬೂರು ಗ್ರಾಹಕ ಅಕಾಲಿಕ ಸಾವು: ಕೆನರಾ ಬ್ಯಾಂಕಿನಿಂದ ರೂ.2ಲಕ್ಷ ಪರಿಹಾರ ವಿತರಣೆ



ದಾ.ನಗರವಾಣಿ ಸುದ್ದಿ

ಜಗಳೂರು, ಅ.31: ತಾಲ್ಲೂಕಿನ ಅಣಬೂರು ಗ್ರಾಮದಲ್ಲಿ ಈಚೆಗೆ ಅಕಾಲಿಕವಾಗಿ ಮರಣ ಹೊಂದಿದ ಕೆನರಾ ಬ್ಯಾಂಕ್ ಗ್ರಾಹಕ ಎಚ್.ಪಿ. ಮಂಜುನಾಥ್ ಅವರ ಕುಟುಂಬಕ್ಕೆ ಪ್ರಧಾನ ಮತ್ರಿ ಜೀವನ ಜ್ಯೋತಿ ವಿಮಾ ಯೋಜನೆಯಡಿ (ಪಿಎಂಜೆಜೆಬಿವೈ) ಕೆನರಾ ಬ್ಯಾಂಕ್ ವತಿಯಿಂದ ರೂ.2 ಲಕ್ಷ ಮೊತ್ತದ ಚೆಕ್ ವಿತರಿಸಲಾಯಿತು.

ಎಚ್.ಬಿ. ಮಂಜುನಾಥ್ ಅವರು ಅಣಬೂರು ಕೆನರಾ ಬ್ಯಾಂಕ್‌ನಲ್ಲಿ ತಮ್ಮ ಉಳಿತಾಯ ಖಾತೆಯಲ್ಲಿ ಪಿಎಂಜೆಜೆಬಿ ಯೋಜನೆಯಡಿ ರೂ. 436 ಕಂತು ಮೊತ್ತವನ್ನು ಪಾವತಿಸಿದ್ದರು. ಇದೇ ಅಕ್ಟೋಬರ್ 28ರಂದು ಅಕಾಲಿಕವಾಗಿ ಮರಣ ಹೊಂದಿದ್ದರು. ಮೃತರ ಪತ್ನಿ ಸುವರ್ಣ ಅವರಿಗೆ ಕೆನರಾ ಬ್ಯಾಂಕ್ ವ್ಯವಸ್ಥಾಪಕ ಹಣಮಂತ ಬೈಗೊಂಡ ಅವರು ಶಾಖೆಯಲ್ಲಿ ರೂ. 2 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

18 ರಿಂದ 50ರ ವಯೋಮಾನದ ಯಾವುದೇ ವ್ಯಕ್ತಿಗಳು ತಮ್ಮ ಬ್ಯಾಂಕ್ ಖಾತೆಗಳ ಮೂಲಕ ಪಿಎಂಜೆಜೆಬಿ ಯೋಜನೆಯಡಿ ವಾರ್ಷಿಕ ರೂ.436 ಕಂತು ಪಾವತಿಸಿದಲ್ಲಿ ಆ ವ್ಯಕ್ತ ಸಾವನ್ನಪ್ಪಿದರೆ ಅವರ ಕುಟುಂಬಕ್ಕೆ ರೂ. 2 ಲಕ್ಷ ಪರಿಹಾರ ಸಿಗಲಿದೆ. ಆದರೆ ಮೃತಪಟ್ಟ ದಿನಾಂಕದಿಂದ 30 ದಿನಗಳ ಒಳಗಾಗಿ ಖಾತೆ ಇರುವ ಬ್ಯಾಂಕಿಗೆ ಅಗತ್ಯ ದಾಖಲೆಗಳನ್ನು ಒದಗಿಸಿದಲ್ಲಿ ತಕ್ಷಣವೇ ರೂ.2ಲಕ್ಷ ಹಣ ಪಡೆಯಬಹುದಾಗಿದೆ. ಮೃತ ಎಚ್.ಬಿ. ಮಂಜುನಾಥ್ ಅವರ ಖಾತೆಯನ್ನು ಪರಿಶೀಲಿಸಿದಾಗ ಅವರು ವಿಮಾ ಕಂತು ಪಾವತಿಸಿರುವುದು ಕಂಡು ಬಂದಿತು. ಕೂಡಲೇ ಅವರ ಕುಟುಂಬಕ್ಕೆ ತಿಳಿಸಿ ದಾಖಲೆ ಪಡೆದು ಇಂದು ಪರಿಹಾರ ನೀಡಲಾಗಿದೆ ಎಂದು ಅಣಬೂರು ಕೆನರಾ ಬ್ಯಾಂಕ್ ವ್ಯವಸ್ಥಾಪಕ ಹಣಮಂತ ಬೈರಗೊಂಡ ತಿಳಿಸಿದರು.

# ಎಂ. ವಿಜಯಲಕ್ಷ್ಮಿಗೆ ಉತ್ತಮ ಆರೈಕೆದಾರರ ರಾಜ್ಯ ಪ್ರಶಸ್ತಿ



ದಾವಣಗೆರೆ: ವಿಕಲಚೇತನರ ಶ್ರೇಯೋಭಿವೃದ್ಧಿಗೆ ದುಡಿಯುತ್ತಿರುವ ರಾಜ್ಯ ವಿಕಲಚೇತನರ ಆರ್‌ಪಿಡಿ ಟಾಸ್ಕ್‌ಫೋರ್ಸ್ ಸಮಿತಿಯ ರಾಜ್ಯ ಗೌರವಾಧ್ಯಕ್ಷರಾದ ಎಂ. ವಿಜಯಲಕ್ಷ್ಮಿ ಅವರಿಗೆ ರಾಜ್ಯ ಸರ್ಕಾರವು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಆರೈಕೆದಾರರ ದಿನಾಚರಣೆಯಂದು 'ಉತ್ತಮ ಆರೈಕೆದಾರರ' ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಎಂ. ವಿಜಯಲಕ್ಷ್ಮಿ ಅವರು ತಮ್ಮ ಎರಡು ವಿಕಲಚೇತನ ಹೆಣ್ಣು ಮಕ್ಕಳ ಹೆಸರಿನಲ್ಲಿ ಸೇವಾ ಟ್ರಸ್ಟ್ ಆರಂಭಿಸಿರುವುದು ಮಾತ್ರವಲ್ಲದೇ, ಸುಮಾರು 8 ವರ್ಷಗಳಿಂದ ವಿಕಲಚೇತನರ ಶ್ರೇಯೋಭಿವೃದ್ಧಿಗಾಗಿ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಬಡ ಮತ್ತು ಅನಾಥ ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯ-ಕ್ಕೆ ಸಂಬಂಧಿಸಿದಂತೆ ಹಲವಾರು ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸಹಾಯ ಮಾಡುತ್ತಿದ್ದಾರೆ. ಈಗಾಗಲೇ ವಿಕಲಚೇತನರ ಕ್ಷೇತ್ರದಲ್ಲಿ ಇವರ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದನ್ನು ಸ್ಮರಿಸಬಹುದು.

# ಆಗ್ನೇಯ ಪದವೀಧರರ ವಿ.ಪ.ಕ್ಷೇತ್ರಕ್ಕೆ ಹೆಸರು ನೊಂದಾಯಿಸಿ; ಎನ್.ಬಿ.ಪ್ರದೀಪ್

ದಾ ನಗರವಾಣಿ ಸುದ್ದಿ

ದಾವಣಗೆರೆ.ಅ.29: ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಬಲ ತುಂಬಲು, ಶಿಕ್ಷಣ, ಯುವ ಸಬಲೀಕರಣ ಹಾಗೂ ರಾಷ್ಟ್ರದ ಭದ್ರ ಬುನಾದಿಯ ಕನಸನ್ನು ನನಸಾಗಿಸಲು ಪದವೀಧರರು ನನ್ನೊಂದಿಗೆ ಕೈಜೋಡಿಸಬೇಕೆಂದು ಆಗ್ನೇಯ ಪದವೀಧರ ಕ್ಷೇತ್ರದ ಬಿಜೆಪಿ ಸ್ಪರ್ಧಾಕಾಂಕ್ಷಿ ಎನ್.ಬಿ.ಪ್ರದೀಪ್ ಕುಮಾರ್ ಮನವಿ ಮಾಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆಯಲ್ಲಿ ಅನೇಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು, ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಸೇರಿದಂತೆ ಸರಕಾರಿ ಕಾಲೇಜುಗಳು ಇವೆ. ಈ ವ್ಯವಸ್ಥೆಗಳು ಮತ್ತಷ್ಟು ಸುಧಾರಿಸಬೇಕು ಎಂದಾದರೆ ಪದವೀಧರ ಕ್ಷೇತ್ರಕ್ಕೆ ಬಲ ಬೇಕು. ಅದನ್ನು ಸಾಧ್ಯವಾಗಿಸಲು ದಾವಣಗೆರೆಯ ಎಲ್ಲ ಪದವೀಧರರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು ಮತದಾನದಲ್ಲಿ ಭಾಗವಹಿಸಬೇಕು ಎಂದರು.

ನನಗೆ ಶಿಕ್ಷಣ, ರಾಜಕೀಯ ವಲಯಗಳಲ್ಲಿ ಈಗಾಗಲೇ ಹಲವು ವರ್ಷಗಳಿಂದ ಸೇವೆ ಸಲ್ಲಿಸಿರುವ ಅನುಭವ ಇದೆ. ಹಲವು ದಶಕಗಳಿಂದ ನಾನು ಶಿಕ್ಷಣ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿರುವುದರಿಂದ ಶಿಕ್ಷಕರು ಮತ್ತು ಯುವಜನರ ಸಮಸ್ಯೆಗಳ ಬಗ್ಗೆ ಪೂರ್ಣ ಅರಿವು ಹಾಗೂ ಮಾಹಿತಿಗಳನ್ನು ಹೊಂದಿದ್ದೇನೆ. ಮುಂದಿನ ದಿನಗಳಲ್ಲಿ ಅವುಗಳ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪ್ರತಿಯೊಬ್ಬ ಪದವೀಧರರೂ ಈ ಚುನಾವಣೆಯಲ್ಲಿ ಪಾಲ್ಗೊಂಡು ಪದವೀಧರ ಕ್ಷೇತ್ರಕ್ಕೆ ಬಲ ತುಂಬಲು. ಯುವ ಸಬಲೀಕರಣ ಭದ್ರ ಬುನಾದಿಯ ಶಿಕ್ಷಣ, ಯುವ ಹಾಗೂ ರಾಷ್ಟ್ರದ ಕನಸನ್ನು ನನಸಾಗಿಸಲು ನನ್ನೊಂದಿಗೆ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರಂಗನಾಥ. ಕಿರಣ್ ಕುಮಾರ್, ವೇದಮೂರ್ತಿ ಇತರರು ಇದ್ದರು.

# ಉದ್ವೇಗ ಬೇಡ; ಬಿಜೆಪಿಗರಿಗೆ...

(1ನೇ ಪುಟದಿಂದ)

ಇತ್ತೀಚಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರಿಗೆ ಕ್ಲಾಸ್ ತೆಗೆದುಕೊಂಡು ನೀತಿ ಬೋಧನೆ ಮಾಡಿದ್ದಾರೆ ಎಂಬ ವಿಚಾರ ತಿಳಿದುಬಂದಿದೆ. ಕಿವಿಮಾತು ಜೊತೆಗೆ ಸರ್ಕಾರದ ವಿರುದ್ಧ ಪರಿಣಾಮಕಾರಿ ಹೋರಾಟಕ್ಕೆ ಸೂಚನೆ ನೀಡಿದ್ದಾರೆ.

ಆರ್‌ಎಸ್‌ಎಸ್ ಕಿವಿಮಾತೇನು?

ಆರ್‌ಎಸ್‌ಎಸ್ ಬಗ್ಗೆ ಕಾಂಗ್ರೆಸ್‌ನವರು ಕೆಟ್ಟ ಅಭಿಪ್ರಾಯ ಸೃಷ್ಟಿಸುತ್ತಿದ್ದಾರೆ. ಸಂಘಕ್ಕೆ 100 ವರ್ಷದ ಇತಿಹಾಸ ಇದ್ದು ಇಂಥ ಎಷ್ಟೋ ಕಠಿಣ ಸಂದರ್ಭಗಳನ್ನು ಸಂಘ ಎದುರಿಸಿ ಮೆಟ್ಟಿ ನಿಂತಿದೆ.

3 ಸಲ ಸಂಘವನ್ನು ನಿಷೇಧ ಮಾಡುವ ಅವರ ಪ್ರಯತ್ನಗಳೇ ವಿಫಲವಾಗಿದೆ. ಈಗ ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸಂಘದ ವಿಚಾರ ಕೆದಕಿದ್ದಾರೆ. ಆತುರದ, ಉದ್ವೇಗದ ಹೇಳಿಕೆ ನೀಡಿ ಕಾಂಗ್ರೆಸ್ ಜಾಲದಲ್ಲಿ ಸಿಕ್ಕಿಬೀಳಬೇಡಿ. ಈಗಿನ ಸವಾಲಿನ ಪರಿಸ್ಥಿತಿಯನ್ನೂ ಸಂಘ ಯಶಸ್ವಿಯಾಗಿ ಎದುರಿಸುತ್ತದೆ.

ಬೈಠಕ್ ನಿರ್ಣಯಗಳೇನು?

ಆರ್‌ಎಸ್‌ಎಸ್ ವಿರುದ್ಧದ ಷಡ್ಯಂತ್ರ ಎದುರಿಸಿ ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪಿಸುವುದು. ಸರ್ಕಾರದ ವೈಫಲ್ಯ, ಭ್ರಷ್ಟಾಚಾರ ಬಯಲಿಗೆಳೆದು ಕಾಂಗ್ರೆಸ್ ನಾಯಕರ ತಂತ್ರಕ್ಕೆ ಪ್ರತಿತಂತ್ರ ಹೆಣೆಯುವುದು. ಕಾಂಗ್ರೆಸ್ ವಿರುದ್ಧ ಪರಿಣಾಮಕಾರಿ ಹೋರಾಟ ರೂಪಿಸುವುದು.

# ಹಲ್ಲೆ ನಡೆಸಿ ದರೋಡೆ: ಕೆಲವೇ...

(1ನೇ ಪುಟದಿಂದ)

.ಆಗ ಆಘಾತದಿಂದ ಆದಿತ್ಯ ಬೈಕಿನಿಂದ ಕೆಳಕ್ಕೆ ಬಿದ್ದಾಗ ಬೈಕಿನ ಡಿಕ್ಕಿಯಲ್ಲಿದ್ದ ಹಣವನ್ನು ತೆಗೆದುಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ. ಆಗ ಸ್ಥಳಕ್ಕೆ ಕಾರಿನಲ್ಲಿ ಬಂದ ಪಾಪಣ್ಣ ಮತ್ತು ಸತೀಶ್ ಅವರು ಆದಿತ್ಯನನ್ನು ಕೊಂಡಜ್ಜಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ದಾವಣಗೆರೆ ಸಿಜಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ವಿಷಯ ತಿಳಿದು ತಕ್ಷಣ ಕಾರ್ಯಚರಣೆಗೆ ಇಳಿದ ಪೊಲೀಸರು, ಮಾಹಿತಿಯನ್ನು ಆಧರಿಸಿ ಕೆಲವೇ ಗಂಟೆಗಳಲ್ಲಿ 6 ಜನ ಆರೋಪಿಗಳನ್ನು ಬಂಧಿಸಿ ದರೋಡೆ ಮಾಡಿದ ಹಣವನ್ನು ಜಪ್ತಿ ಮಾಡಿದ್ದಾರೆ.

ಗ್ರಾಮಾಂತರ ಡಿವೈಎಸ್‌ಪಿ ಬಸವರಾಜ್, ವೃತ್ತ ನಿರೀಕ್ಷಕ ಸುರೇಶ್ ಸಗರಿ ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಯುವರಾಜ್ ಕಂಬಳಿ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಚರಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಪ್ರಸಂಶಿಸಿದ್ದಾರೆ.

# ಎಕ್ಕೆಗೊಂದಿಯಲ್ಲಿ ಸಾಕ್ಷರತಾ ಆಂದೋಲನ



ಚನ್ನಗಿರಿ ತಾಲೂಕು ಎಕ್ಕೆಗೊಂದಿ ಗ್ರಾಮದಲ್ಲಿ ಜ್ಞಾನ ವಿಕಾಸ ಕೇಂದ್ರದ ಮಾಸಿಕ ಸಭೆಯು ಒಕ್ಕೂಟದ ಅಧ್ಯಕ್ಷೆ ನಾಗವೇಣಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿ ಎಚ್ ಎಂ ಸದಾನಂದ ಮೆಕಾಲೆ ಶಿಕ್ಷಣ, ವಯಸ್ಕರ ಶಿಕ್ಷಣ, ಸಾಕ್ಷರತಾ ಆಂದೋಲನದಲ್ಲಿ ವಿವಿಧ ರೀತಿಯ ಶಿಕ್ಷಣವನ್ನು ತಿಳಿಸಿದರು. ಸಮನ್ವಯಾಧಿಕಾರಿ ಶಶಿಕಲಾ, ಸೇವಾಪ್ರತಿನಿಧಿ ರೇಖಾ ಹಾಗೂ ಮಹಿಳಾ ಸದಸ್ಯರು ಇದ್ದರು.

# ಸಂಗೀತ ಶಿಕ್ಷಕಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ



ದಾ ನಗರವಾಣಿ ಸುದ್ದಿ

ದಾವಣಗೆರೆ: ಅತ್ಯಂತ ಪ್ರೀತಿ ಮತ್ತು ಕಾಳಜಿಯಿಂದ ಸೇವೆ ಸಲ್ಲಿಸಿ ಮತ್ತೊಂದು ಸ್ಥಳಕ್ಕೆ ವರ್ಗಾವಣೆಗೊಂಡು, ಕರ್ತವ್ಯಕ್ಕೆ ಹಾಜರಾಗಲು ಇಲ್ಲಿಂದ ಅಲ್ಲಿಗೆ ಹೊರಟು ನಿಂತ ತಮ್ಮ ನೆಚ್ಚಿನ ಸಂಗೀತ ಶಿಕ್ಷಕಿಯನ್ನು ಬೀಳ್ಕೊಡಲು ಒಲ್ಲದ ಮನಸ್ಸಿನಿಂದ ವಿದ್ಯಾರ್ಥಿಗಳ ಕಣ್ಣುಗಳು ತೇವ ಗೊಂಡಿದ್ದವು. ಮತ್ತೊಂದೆಡೆ ತಮ್ಮೊಡನೆ ಹಲವು ವರ್ಷಗಳಿಂದ ಜೊತೆಗೂಡಿ ಕರ್ತವ್ಯ ನಿಷ್ಠೆಯೊಂದಿಗೆ ಸರಳತೆ, ಸಜ್ಜನಿಕೆ, ಪ್ರೀತ್ಯಾಭಿಮಾನ, ಗೌರವಾದಾರ ಹಾಗೂ ಸಾಮರಸ್ಯದಿಂದ ಕಾರ್ಯ ನಿರ್ವಹಿಸಿ ಎಲ್ಲರ ಆಪ್ತ ಒಡನಾಡಿಯಾಗಿದ್ದ ಸಹೋದ್ಯೋಗಿಯನ್ನು ಬೀಳ್ಕೊಡಲೇ ಬೇಕಾದ ಅನಿವಾರ್ಯ ಪ್ರಸಂಗಕ್ಕೆ ಮುಖ್ಯೋಪಾಧ್ಯಾಯರಾದಿಯಾಗಿ ಎಲ್ಲಾ ಶಿಕ್ಷಕರ ಹೃದಯಗಳು ಭಾರಗೊಂಡಿದ್ದವು.

ಸುಮಾರು 10 ವರ್ಷಗಳಿಂದ ದಾವಣಗೆರೆ ದಕ್ಷಿಣ ವಲಯ ವ್ಯಾಪ್ತಿಯ ಶಾಮನೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯ ಅಂಚಿನಲ್ಲಿರುವ ಶ್ರೀಮತಿ ಉಮಾ ಮಹಾದೇವ್ ಅವರು ಹೆಚ್ಚುವರಿ ಶಿಕ್ಷಕಿಯಾಗಿ ಗೋಪನಾಳು ಸರ್ಕಾರಿ ಪ್ರೌಢಶಾಲೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಹಾಗೂ ಎಲ್ಲಾ ಶಿಕ್ಷಕರು ಭಾರವಾದ ಹೃದಯದಿಂದ ಬೀಳ್ಕೊಟ್ಟರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಬಸವರಾಜಪ್ಪ ವಿ ಎನ್, ಅವರು ಶಾಲೆಯ ಪರವಾಗಿ ಉಮಾ ಮಹಾದೇವ್ ಅವರನ್ನು ಪೇಟಾ ತೊಡಿಸಿ, ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು. ಎಲ್ಲಾ ಶಿಕ್ಷಕರು ತಮ್ಮ ಒಡನಾಟದ ಅನಿಸಿಕೆ ಹಂಚಿಕೊಂಡರು. ವಿದ್ಯಾರ್ಥಿಗಳು ನೆನಪಿನ ಕಾಣಿಕೆ ನೀಡಿ ತೇವಗೊಂಡ ಕಂಗಳಿಂದ ಬೀಳ್ಕೊಟ್ಟರು.

ಶಿಕ್ಷಕರಾದ ಚಂದ್ರಪ್ಪ, ನಾಗಪ್ಪ, ಶಿವಯ್ಯ, ಗಂಗಾಧರ ಬಿ ಎಲ್ ನಿಟ್ಟೂರ್, ಶ್ರೀಮತಿ ಸವಿತಾ ಲಕ್ಷ್ಮೀಪತಿ, ಶ್ರೀಮತಿ ಆಶಾ ಪಾಟೀಲ್, ಶ್ರೀಮತಿ ಉಮಾ ಮಹಾದೇವ್, ವಿಜಯ ಕುಮಾರಿ, ಶ್ರೀಮತಿ ಪುಷ್ಪಮ್ಮ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಹಾಗೂ ಎಸ್‌ಡಿಎಂಸಿ ಕಮಿಟಿಯವರು ಹಾಜರಿದ್ದರು.

# ಸಿ.ಎ. ಆಕಾಂಕ್ಷಿಗಳಿಗೆ ಶಿಕ್ಷಣ ತರಬೇತಿ



ದಾ ನಗರವಾಣಿ ಸುದ್ದಿ

ದಾವಣಗೆರೆ: ಚಾರ್ಟೆಡ್ ಅಕೌಂಟೆಂಟ್ ಆಗುವ ಆಸಕ್ತಿಯುಳ್ಳ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರಿಗಾಗಿ ಉಚಿತ ಸಿ.ಎ ತರಬೇತಿ ಕಾರ್ಯಕ್ರಮವನ್ನು ನಗರದ ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉದ್ಘಾಟಿಸಲಾಯಿತು.

ಸರ್ಕಾರಿ ಕಾಲೇಜು ವಿದ್ಯಾರ್ಥಿನಿಯರಿಗೆ ವೃತ್ತಿಪರ ಶಿಕ್ಷಣವನ್ನು ನೀಡುವ ಮೂಲಕ ಅವರ ಭವಿಷ್ಯ ಕಟ್ಟುವ ಉದ್ದೇಶದಿಂದಈಕಾರ್ಯಕ್ರಮವನ್ನುಆರಂಭಿಸಲಾಗಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಿದ ಚಾರ್ಟೆಡ್ ಅಕೌಂಟೆಂಟ್ ಯಶವಂತ್ ಲಾತೋರೆ ಅವರು ಕೋರ್ಸ್‌ನ ರಚನೆ, ತಯಾರಿ ವಿಧಾನ ಹಾಗೂ ಭವಿಷ್ಯದ ಉದ್ಯೋಗಾವಕಾಶಗಳ ಕುರಿತು ವಿವರಿಸಿದರು ಮತ್ತು ವಿದ್ಯಾರ್ಥಿನಿಯರನ್ನು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಪ್ರೇರೇಪಿಸಿದರು.

ಕಾರ್ಯಕ್ರಮಕ್ಕೆ ಕಾಲೇಜಿನ ಪ್ರಾಂಶುಪಾಲ ಕುಸಗಟ್ಟಿ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಅರ್ಥಶಾಸ್ತ್ರ ಉಪನ್ಯಾಸಕ ಶಂಶುದ್ದೀನ್ ಖಾನ್ ಆಯೋಜಿಸಿದ್ದರು.

ಈ ಕಾರ್ಯಕ್ರಮವನ್ನು ಕಾಲೇಜಿನ ಅರ್ಥಶಾಸ್ತ್ರ ಮತ್ತು ವಾಣಿಜ್ಯ ವಿಭಾಗದ ಸಹಯೋಗದಿಂದ ಆಯೋಜಿಸಲಾಗಿದೆ. ಶಿಕ್ಷಕರು, ವಿದ್ಯಾರ್ಥಿನಿಯರು ಮತ್ತು ಪೋಷಕರು ಈ ವಿಶೇಷ ಶಿಕ್ಷಣಾತ್ಮಕ ಹೆಜ್ಜೆಗೆ ಪ್ರಶಂಸಿಸಿದ್ದಾರೆ.

# ಮಕ್ಕಳ ಅಭಿವೃದ್ಧಿಯಲ್ಲಿ ಅಂಗನವಾಡಿಗಳ ಪಾತ್ರ ಬಹು ಮೌಲ್ಯವಾದುದು: ಎಂಪಿ ಲತಾ



ದಾ ನಗರವಾಣಿ ಸುದ್ದಿ

ಹರಪನಹಳ್ಳಿ : ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಭದ್ರ ಬುನಾದಿ ಹಾಕುವರು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಅವರು ಪಟ್ಟಣದ ಎಡಿಬಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಅಂಗನವಾಡಿಗಳು ಸ್ಥಾಪನೆಯಾಗಿ 50 ವರ್ಷಗಳ ಸುದೀರ್ಘ ನೆನಪಿಗಾಗಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಎಂ.ಪಿ. ರವೀಂದ್ರ ಪ್ರತಿಷ್ಟಾನದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾನುವಾರ ಮಾತನಾಡಿದರು.

ಕೋವಿಡ್ ಬಂದಾಗ ಅಂಗನವಾಡಿ ಕಾರ್ಯಕರ್ತೆಯರು ಜೀವ ಲೆಕ್ಕಿಸದೆ ಕೆಲಸ ಮಾಡಿದ್ದೀರಿ, ಕೆಲವರು ಅಂಗನವಾಡಿ ಕಾರ್ಯಕರ್ತೆಯರು ಏನು ಬ್ಯಾಗ್ ಹಾಕಿಕೊಂಡು ಹೋಗುತ್ತಾರೆ ಎನ್ನುತ್ತಾರೆ, ಆದರೆ ಅದೇ ಬ್ಯಾಗ್ ಗುರುತಿನಿಂದ ನಾನು ಗೆದ್ದಿದ್ದು ಎಂದು ಸ್ಮರಿಸಿದರು.

ತಳ ಮಟ್ಟದವರು ನನ್ನನ್ನು ಗುರುತಿಸಿದ್ದಾರೆ, ಮುಷ್ಟಿ ಪ್ರೀತಿ ನೀಡಿದ್ದೀರಿ ನಿಮಗೆ ನಾನು ಅಭಿನಂದನೆ ಸಲ್ಲಿಸೋದು ಹೆಮ್ಮೆಯ ಸಂಗತಿ ಎಂದ ಅವರು, ಒಟ್ಟಿನಲ್ಲಿ .ಅಂಗನವಾಡಿ ಕಾರ್ಯಕರ್ತೆಯರು ಸಾಮಾಜಿಕ ಕಳಕಳಿಯುಳ್ಳವರು ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ವಿ.ಅಂಜಿನಪ್ಪ, ಕುಬೇರಗೌಡ, ಮುಖಂಡ ರಾದ ಗೌತಮ್ ಪ್ರಭು, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ, ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಲಾಟಿದಾದಾಪೀರ, ಪುರಸಭಾ ಸದಸ್ಯರಾದ ಅಬ್ದುಲ್ ರಹಿಮಾನ್, ಜಾಕೀರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ , ಗ್ಯಾರಂಟಿ ಯೋಜನೆಗಳ ಅನುಷ್ಟಾನ ಸಮಿತಿ ಅಧ್ಯಕ್ಷ ಉದಯಶಂಕರ, ಯುವ ಮುಖಂಡ ಶಮಿವುಲ್ಲಾ, ವಕೀಲ ಬಸವರಾಜ ಸಂಗಪ್ಪನವರ್, ಇಸ್ಮಾಯಿಲ್ ಎಲಿಗಾರ, ಮತ್ತೂರು ಬಸವರಾಜ, ಮತ್ತು ಮಕ್ಕಳ ಇಲಾಖೆಯ ಮೇಲ್ವಿಚಾರಕಿ, ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯ ಅಧ್ಯಕ್ಷೆ ರು ಉಪಸ್ಥಿತರಿದ್ದರು.



ಹರಪನಹಳ್ಳಿ : ಪಟ್ಟಣದ ಕಾಶಿ ಬಡಾವಣೆಯ ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ್ಗ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ರವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಶಾಸಕಿ ಎಂ.ಪಿ.ಲತಾ, ಮುಖಂಡ ಮಲ್ಲಿಕಾರ್ಜುನ, ಎಂ.ವಿ.ಅಂಜಿನಪ್ಪ, ಕುಬೇರಗೌಡ ಇತರರು ಇದ್ದರು.

# ಕಾಲುಬಾಯಿ ರೋಗ ಲಸಿಕಾ...

(1ನೇ ಪುಟದಿಂದ) ಇಂದಿನಿಂದ ಡಿಸೆಂಬರ್ 02ರ ವರೆಗೆ ಹಮ್ಮಿಕೊಳ್ಳಲಾಗಿದೆ. ಲಸಿಕೆ ವೇಳೆ ಪ್ರತಿ ಜಾನುವಾರುವಿಗೆ ಪ್ರತ್ಯೇಕ ಸಿರಿಂಜ್ ಮತ್ತು ನೀಡಲ್‌ಗಳನ್ನು ಬಳಸಲಾಗುವುದು.

ಲಸಿಕೆದಾರರು ನಿಮ್ಮ ಗ್ರಾಮಕ್ಕೆ, ನಿಮ್ಮ ಮನೆ ಬಾಗಿಲಿಗೆ ಭೇಟಿ ನೀಡಿ ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ.

ಆದ್ದರಿಂದ ತಪ್ಪದೇ ನಿಮ್ಮ ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆಯನ್ನು ಹಾಕಿಸಿ ರೋಗ ಬರದಂತೆ ಜಾನುವಾರುಗಳನ್ನು ರಕ್ಷಿಸಿ, ಆರ್ಥಿಕ ನಷ್ಟ ತಡೆಯಿರಿ. ರಾಜ್ಯವನ್ನು ಕಾಲುಬಾಯಿ ರೋಗ ಮುಕ್ತ ವಲಯವನ್ನಾಗಿಸಬೇಕು ಎಂದರು.

ನಿಮ್ಮ ಗ್ರಾಮಕ್ಕೆ ಭೇಟಿ ನೀಡುವ ಲಸಿಕಾ ಸಿಬ್ಬಂದಿಗೆ ಸಹಕರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ಸಾಕ್ಷಿಗಳೇ ಸಕಲಕ್ಕೂ ಪುರಾವೆಗಳಲ್ಲ
ಮನಃಸಾಕ್ಷಿಗೆ ಆವುದೂ ಸಮವಲ್ಲ
ಕರ್ಮವೇ ಸಕಲಕ್ಕೂ ಉತ್ತರವಲ್ಲಾ
ಒಲ್ಮೆಕೆಯ ಓಣಿಯೊಳು ಓಡುವೆಯಲ್ಲಾ..!

– ಡಾ. ಮಮು

### ದಿನಕ್ಕೊಂದು ನುಡಿ ಮುತ್ತು

ಯಾರಾದರೂ ಒಬ್ಬರ ಮೇಲೆ
ವಿನಾಕಾರಣ ಆರೋಪ ಮಾಡಿದರೆ
ಮೌನವಾಗಿದ್ದುಬಿಡಬೇಕು,
ವಾದವಿವಾದ ಸಲ್ಲದು,ಯಾಕೆಂದರೆ
ಸರಿ ತಪ್ಪುಗಳ ಲೆಕ್ಕಾಚಾರವನ್ನು
ನಾವು ಮಾಡುವ ಅವಶ್ಯಕತೆ ಇಲ್ಲ!
ಅವುಗಳಿಗೆ ಮೇಲಿನವನು ಚಾಚೂ
ತಪ್ಪದೇ ಲೆಕ್ಕ ಬರೆದಿಟ್ಟುಕೊಳ್ಳುವನು!!

– ಮಂಜುಳಾ ಪ್ರಸಾದ್ ದಾವಣಗೆರೆ

**ನಗರವಾಣಿ** ದಾವಣಗೆರೆ
**ನವೆಂಬರ್ 04, 2025**
**ಮಂಗಳವಾರ,**
**ಪುಟ–3**

ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186

# ನ್ಯಾ॥ ಅಣ್ಣಯ್ಯನವರಿಗೆ ಆತ್ಮೀಯ ಬೀಳ್ಕೊಡುಗೆ




ದಾವಣಗೆರೆ.ನ.3: ವರ್ಗಾವಣೆಗೊಂಡ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರಿಗೆ ಜಿಲ್ಲಾ ವಕೀಲರ ಸಂಘದಿಂದ ಸೋಮವಾರ ಬೀಳ್ಕೊಡುಗೆ ಸಮಾರಂಭ ನಡೆಯಿತು.

ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಜಿಲ್ಲಾ ವಕೀಲರ ಸಾಂಸ್ಕೃತಿಕ ಸಭಾ ಭವನದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಆರ್.ಗುರುಬಸವರಾಜ್ ವಹಿಸಿ, ನ್ಯಾಯಾಧೀಶರು ಸಲ್ಲಿಸಿದ ಸೇವೆ ಮತ್ತು ನ್ಯಾಯಾಂಗ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಪ್ರಮುಖವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಶ್ರೀಮತಿ ಡಿ.ಕೆ.ವೇಲಾ, 2ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್.ಎನ್.ಪ್ರವೀಣ್ ಕುಮಾರ್, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಶ್ರೀರಾಮನಾರಾಯಣ ಹೆಗಡೆ, ಜಿಲ್ಲಾ ಕೌಟುಂಬಿಕ ನ್ಯಾಯಾಧೀಶ ಶಿವಪ್ಪ ಗಂಗಪ್ಪ ಸಲಗರೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶೆ ಹೆಚ್.ಕೆ.ರೇಷ್ಮಾ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ರಾಮಚಂದ್ರ ಕಲಾಲ್, ಹಿರಿಯ ವಕೀಲರಾದ ಹೆಚ್. ಎನ್. ರಾಜಶೇಖರಪ್ಪ, ಎನ್. ಎಂ. ಕಿಲೆದಾರ್, ಎಸ್. ಮಂಜು ರೇವಣಸಿದ್ದಪ್ಪ, ಜಿ.ಇ.ವನಜಾಕ್ಷಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮೆಕ್ಕೆಜೋಳ ಖರೀದಿ ಕೇಂದ್ರ ತೆರೆದು ರೂ. 3000 ಬೆಂಬಲ ಬೆಲೆ ನಿಗದಿಗೆ ರೈತ ಸಂಘ ಆಗ್ರಹ




ದಾ.ನಗರವಾಣಿ ಸುದ್ದಿ

ಜಗಳೂರು, ನ.3: ಪಟ್ಟಣದಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆದು ಕನಿಷ್ಠ ರೂ.3000 ಬೆಂಬಲ ಬೆಲೆ ನಿಗದಿಗೊಳಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್) ಬಣದಿಂದ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿ ಮುಂಬಾಗ ಜಮಾಯಿಸಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಅವರಿಗೆ ಮನವಿ ಸಲ್ಲಿಸಿದರು.

ಸಂಘಟನೆ ತಾಲ್ಲೂಕು ಅಧ್ಯಕ್ಷ ಚಿರಂಜೀವಿ ಸಿ.ಎಂ ಹೊಳೆ ಮಾತನಾಡಿ, ತಾಲ್ಲೂಕಿನಲ್ಲಿ ಅತಿ ಹೆಚ್ಚು ಹೆಕ್ಟರ್ ಪ್ರದೇಶದಲ್ಲಿ ಸಾಂಪ್ರದಾಯಿಕ ಬೆಳೆ ಮೆಕ್ಕೆಜೋಳ ಬೆಳೆ ಬಿತ್ತನೆ ನಡೆಸಲಾಗಿದೆ. ಹವಾಮಾನ ವೈಪರಿತ್ಯದಿಂದ ಬೆಳೆ ನಷ್ಟವಾಗಿ ಮೆಕ್ಕೆಜೋಳ ಇಳುವರಿ ಕುಂಠಿತವಾಗಿದೆ ಎಂದರು.

ಸಕಾಲದಲ್ಲಿ ಬೆಳೆ ಸಿಗದೆ, ಸೂಕ್ತ ಬೆಲೆಯಿಲ್ಲದೆ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಮಧ್ಯೆ ಸರ್ಕಾರ ಮೆಕ್ಕೆಜೋಳಕ್ಕೆ ರೂ. 2400 ಕನಿಷ್ಠ ಬೆಲೆ ನಿಗದಿ ಮಾಡಿದೆ. ಆದರೂ ದಲ್ಲಾಳಿಗಳು ಮಾರುಕಟ್ಟೆಯಲ್ಲಿ ಕೇವಲ ರೂ.1500ರಿಂದ1700 ಬೆಲೆಗೆ ಖರೀದಿ ಮಾಡುತ್ತಿರುವುದು ರೈತರಿಗೆ ಗಾಯದ ಮೇಲೆ ಬರೆ ಬರೆ ಎಳೆದಂತಾಗಿದೆ. ಕೂಡಲೇ ಖರೀದಿ ಕೇಂದ್ರ ತೆರದು, ರೂ.3000 ಬೆಂಬಲ ಬೆಲೆ ನಿಗಧಿ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ತಾಲ್ಲೂಕು ಕಾರ್ಯದರ್ಶಿ ರಾಜನಹಟ್ಟಿ ರಾಜು, ಪದಾಧಿಕಾರಿಗಳಾದ ಕಾನನಕಟ್ಟೆ ತಿಪ್ಪೇಸ್ವಾಮಿ, ಗೌಡಗೊಂಡನಹಳ್ಳಿ ಸತೀಶ್, ವೀರೇಶ್, ಸಹ ದೇವರೆಡ್ಡಿ, ಗುರುಸಿದ್ದಪ್ಪ, ಕರಿಯಣ್ಣ, ಶರಣಪ್ಪ, ರಂಗಪ್ಪ, ಪರುಸಪ್ಪ, ಬಸಣ್ಣ ಸೇರಿದಂತೆ ಇತರರು ಇದ್ದರು.

## ತೆಲಂಗಾಣ: ಬಸ್‌ಗೆ ಜಲ್ಲಿಕಲ್ಲು ತುಂಬಿದ್ದ...

(1ನೇ ಪುಟದಿಂದ) ಘಟನೆ ವೇಳೆ ಬಸ್ ನಲ್ಲಿ ಸುಮಾರು 70 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಎಂದು ತಿಳಿದುಬಂದಿದೆ. ಟಿಪ್ಪರ್ ಪಲ್ಟಿಯಾದ ಪರಿಣಾಮ ಜಲ್ಲಿಕಲ್ಲಿನ ಕೆಳಗೆ ಪ್ರಯಾಣಿಕರು ಸಿಲುಕಿಕೊಂಡಿದ್ದಾರೆ. ಘಟನೆಯಲ್ಲಿ 24 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಚೆವೆಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ.

ಜಲ್ಲಿ ತುಂಬಿದ್ದ ಲಾರಿ ಅತಿ ವೇಗದಲ್ಲಿ ಚಲಿಸುತ್ತಿದ್ದುದೇ ಅಪಘಾತಕ್ಕೆ ಕಾರಣ ಎಂಬುದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಏತನ್ಮಧ್ಯೆ ಮಿರ್ಜಗುಡ ರಸ್ತೆ ಅಪಘಾತದಿಂದ ಆಘಾತಕ್ಕೊಳಗಾಗಿರುವುದಾಗಿ ಸಿಎಂ ರೇವಂತ್ ರೆಡ್ಡಿ ತಿಳಿಸಿದ್ದು, ತಕ್ಷಣವೇ ಅಪಘಾತದ ಸ್ಥಳಕ್ಕೆ ಹೋಗಲು ಅಧಿಕಾರಿಗಳಿಗೆ ಸಿಎಂ ಆದೇಶಿಸಿದ್ದಾರೆ. ಅಗತ್ಯ ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ.

ಬಸ್ ಅಪಘಾತದಲ್ಲಿ ಗಾಯಗೊಂಡ ಎಲ್ಲರನ್ನು ತಕ್ಷಣ ಹೈದರಾಬಾದ್‌ಗೆ ಸ್ಥಳಾಂತರಿಸಲು ಮತ್ತು ಅವರಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡುವಂತೆ ಸಿಎಸ್ ಮತ್ತು ಡಿಜಿಪಿಗೆ ಮುಖ್ಯಮಂತ್ರಿ ಆದೇಶಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಲು ಮತ್ತು ಅದಕ್ಕಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗೆ ಆದೇಶಿಸಿದ್ದಾರೆ.

ಈ ನಡುವೆ ತೆಲಂಗಾಣ ಸಾರಿಗೆ ಸಚಿವ ಪೊನ್ನಂ ಪ್ರಭಾಕರ್ ಅವರು ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ನಾಗಿ ರೆಡ್ಡಿ ಅವರೊಂದಿಗೆ ಮಾತುಕತೆ ನಡೆಸಿದ್ದು. ಘಟನೆ ಕುರಿತು ಮಾಹಿತಿ ಪಡೆದಿದ್ದಾರೆ.ಅಲ್ಲದೆ, ಗಾಯಾಳುಗಳಿಗೆ ಸರಿಯಾದ ವೈದ್ಯಕೀಯ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳುವಂತೆ ಅವರು ರಂಗ ರೆಡ್ಡಿ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

## ಅಶ್ಲೀಲ ಚಿತ್ರ ನಿಷೇಧದ ಬಗ್ಗೆ ನೇಪಾಳದಲ್ಲಿ...

(1ನೇ ಪುಟದಿಂದ)

ತಡೆಯಲು ಯಾವುದೇ ಕಾರ್ಯವಿಧಾನವಿಲ್ಲ." ಎಂದು ಅರ್ಜಿದಾರರು ಹೇಳಿದ್ದರು.

ಆದಾಗ್ಯೂ, ಮಕ್ಕಳು ಏನು ಬ್ರೌಸ್ ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು ಅಥವಾ ಮಕ್ಕಳು ಏನನ್ನು ನೋಡಬಾರದೆಂಬುದನ್ನು ನಿರ್ಬಂಧಿಸುವುದಕ್ಕಾಗಿ ನೈಜ ಸಮಯದಲ್ಲಿ ಟ್ರ್ಯಾಕ್ ಮಾಡಲು ಪೋಷಕರು ಅಥವಾ ಮಕ್ಕಳ ಕಾಳಜಿ ವಹಿಸುವವರಿಗೆ ಅನುಮತಿಸುವ ಸಾಫ್ಟ್‌ವೇರ್‌ಗಳಿವೆ. "ಈ ಸಮಸ್ಯೆಯನ್ನು ನಿಭಾಯಿಸಲು ಯಾವುದೇ ಪರಿಣಾಮಕಾರಿ ಕಾನೂನು ಇಲ್ಲ ಮತ್ತು ಅಶ್ಲೀಲ ಚಿತ್ರಗಳನ್ನು ನೋಡುವುದು ವ್ಯಕ್ತಿಗಳು ಹಾಗೂ ಸಮಾಜದ ಮೇಲೆ, ವಿಶೇಷವಾಗಿ 13 ರಿಂದ 18 ವರ್ಷ ವಯಸ್ಸಿನ ಬೆಳೆಯುತ್ತಿರುವ ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ." ಎಂದು ಅರ್ಜಿದಾರರು ವಾದಿಸಿದ್ದರು.

ಅರ್ಜಿದಾರರು 'ಆಘಾತಕಾರಿ ದತ್ತಾಂಶ' ಎಂದು ಹೇಳಲಾದ ಮಾಹಿತಿಯನ್ನು ಸಹ ಕೋರ್ಟ್ ಎದುರು ಪ್ರಸ್ತುತಪಡಿಸಿದರು, ಇದರಲ್ಲಿ ಮಕ್ಕಳ ಲೈಂಗಿಕ ವಸ್ತುಗಳನ್ನು ಚಿತ್ರಿಸುವಂತಹ 20 ಕೋಟಿಗೂ ಹೆಚ್ಚು ಅಶ್ಲೀಲ ವೀಡಿಯೊಗಳು ಅಥವಾ ಕ್ಲಿಪ್‌ಗಳು ಭಾರತದಲ್ಲಿ ಮಾರಾಟಕ್ಕೆ ಲಭ್ಯವಿದೆ ಎಂದು ಅಂದಾಜಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ರ ಅಡಿಯಲ್ಲಿ ಸರ್ಕಾರ ಈ ಸೈಟ್‌ಗಳ ಸಾರ್ವಜನಿಕ ಪ್ರವೇಶವನ್ನು ನಿರ್ಬಂಧಿಸುವ ಅಧಿಕಾರವನ್ನು ಹೊಂದಿದೆ ಎಂದು ಸಹ ಅರ್ಜಿದಾರರು ಕೋರ್ಟ್ ಗೆ ತಿಳಿಸಿದ್ದಾರೆ.

## ಹರಪನಹಳ್ಳಿ ಪಟ್ಟಣ ಸೌಂದರ್ಯೀಕರಣಕ್ಕೆ...

(1ನೇ ಪುಟದಿಂದ)

ಇನ್ನೊಬ್ಬ ಹಿರಿಯ ಸದಸ್ಯ ಅಬ್ದುಲ್ ರಹಿಮಾನ್ ಮಾತನಾಡಿ ಶಾಸಕರು ಸಾಕಷ್ಟು ಅಭಿವೃದ್ದಿ ಕೆಲಸ ಮಾಡಿದ್ದಾರೆ, ಮುಂದೆ ಸಹ ನಾವುಗಳು ಅಭಿವೃದ್ದಿ ಕೆಲಸ ಗಳಿಗೆ ಸಹಕರಿಸುತ್ತೇವೆ ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಮಾತನಾಡಿ ಸರ್ಕಾರದಿಂದ ಜಾರಿಯಾದ ಅಭಿವೃದ್ದಿ ಕಾರ್ಯಗಳನ್ನು ಸಮರ್ಪಕವಾಗಿ ಅನುಷ್ಟಾನಕ್ಕೆ ತರುತ್ತೇವೆ ಎಂದು ಹೇಳಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಜೈನ ಅಭಿವೃದ್ದಿ ಯೋಜನೆಯಲ್ಲಿ ಪಟ್ಟಣದ ಶಾಂತಿನಾಥ ದಿಗಂಬರ ಜೈನ ಜೀರ್ಣೋದ್ದಾರಕ್ಕೆ 8 ಲಕ್ಷ ಚೆಕ್ ನ್ನು ಹಾಗೂ 3 ಜನ ಜೈನ ಅರ್ಚಕರಿಗೆ ಗೌರವ ಧನದ ಚೆಕ್ ನ್ನು ಈ ಸಂದರ್ಭದಲ್ಲಿ ಶಾಸಕರು ವಿತರಿಸಿದರು.

ಕರ್ನಾಟಕ ಮೌಲಾನ ಅಜಾದ್ ಪಬ್ಲಿಕ್ ಶಾಲೆ ಪಟ್ಟಣಕ್ಕೆ ಶಾಸಕರು ಮಂಜೂರು ಮಾಡಿಸಿದ್ದಾರೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದರು.

ಪುರಸಭಾ ಅಧ್ಯಕ್ಷೆ ಎಂ.ಪಾತೀಮಾಭೀ, ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ, ಸದಸ್ಯರುಗಳಾದ ಲಾಟಿದಾದಾಪೀರ, ಗೊಂಗಡಿ ನಾಗರಾಜ, ಉದ್ದಾರ ಗಣೇಶ, ಮಂಜುನಾಥ ಇಜಂತಕರ್, ಜಾಕೀರ ಹುಸೇನ್, ಟಿ.ವಸಂತಪ್ಪ, ಭೀಮವ್ವ , ಭರತೇಶ, ಜಾವೇದ್, ಕಿರಣ್ ಶಾನ್ ಬಾಗ್, ಹನುಮಕ್ಕ, ಶೋಭಾ, ಗುಡಿ ನಾಗರಾಜ, ಹೇಮಣ್ಣ ಮೋರಗೇರಿ, ಅಲೀಂ, ಗೌಳಿ ವಿನಾಯಕ, ಬಿಇಒ ಎಚ್.ಲೇಪಾಕ್ಷಪ್ಪ, ಮುಖ್ಯಾಧಿಕಾರಿ ರೇಣುಕಾ ಎಸ್.ದೇಸಾಯಿ ಉಪಸ್ಥಿತರಿದ್ದರು.

## ಕೆಲಸ ಕೊಡಿಸುವುದಾಗಿ ನಿರುದ್ಯೋಗಿ...

(1ನೇ ಪುಟದಿಂದ)

ಮಾಡಿದ್ದು ತಪ್ಪಿಸಿಕೊಂಡಿದ್ದಾನೆ. ನಂತರ ಯುವಕರು ಶ್ರೀರಾಮಸೇನೆ ಕಾರ್ಯಕರ್ತರೊಂದಿಗೆ ವಂಚಕ ಆ ವ್ಯಕ್ತಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ.

# ರಾಣೆಬೆನ್ನೂರು: ಕನ್ನಡ ಆತ್ಮದ ಧ್ವನಿ




ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು, ನ.03: ಕನ್ನಡ ಭಾಷೆ ನಮ್ಮ ಆತ್ಮದ ಧ್ವನಿಯಾಗಿದೆ ಎಂದು ಮುಖ್ಯೋಪಾದ್ಯಾಯ ಕೇಶವ ಬಾರ್ಕಿ ಹೇಳಿದರು.

ತಾಲೂಕಿನ ಕರೂರು ಗ್ರಾಮದ ಸರ್ಕಾರಿ ಮಾದರಿ ಕೇಂದ್ರ ಶಾಲೆ, ಕನ್ನಡ ಸಾಹಿತ್ಯ ಪರಿಷತ್ ಗ್ರಾಮ ಘಟಕ ಕರೂರು ಇವರ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡವು ತನ್ನದೇ ಆದ ಶ್ರೀಮಂತ ಪರಂಪರೆ, ಸಂಸ್ಕೃತಿ, ಇತಿಹಾಸ ಹೊಂದಿರುವ ಪಾವನ ಭೂಮಿ, ಕಲೆ ಸಾಹಿತ್ಯದ ತವರೂರು. ಅದು ನಮ್ಮ ಉಸಿರಾಗಿದೆ. ಅನೇಕ ಸಾಹಿತ್ಯದ ದಿಗ್ಗಜರ ಕೃತಿಗಳು ನಮ್ಮ ಕನ್ನಡದ ಕೀರ್ತಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿವೆ ಎಂದರು.

ಶಿಕ್ಷಕ ಇಸ್ಮಾಯಿಲ್ ಐರಣಿ ಮಾತನಾಡಿ, ಬಂಡೆಗಲ್ಲುಗಳಲ್ಲಿ ಕೆತ್ತಿ, ತಾಳೆಗರಿಯಲ್ಲಿ ಮುತ್ತಿನಂತೆ ಪೋಣಿಸಿ, ಪುಸ್ತಕಗಳ ಪುಟದೊಳಗೆ ದುಂಡನೆಯ ಅಕ್ಷರವಾಗಿ ಅವಿತು ಕುಳಿತಿರುವ ಕನ್ನಡ ಜಗತ್ತಿನ ಅತೀ ಸುಂದರವಾದ ಅಕ್ಷರಗಳನ್ನು ಹೊಂದಿರುವುದರಲ್ಲಿ ಸ್ಥಾನ ಹೊಂದಿರುವುದು ನಮ್ಮ ಹೆಮ್ಮೆ ಎಂದರು.

ಕಾರ್ಯಕ್ರಮದಲ್ಲಿ ಕುಮಾರ ಸಣ್ಣಬೊಮ್ಮಜ್ಜಿ, ಹನುಮಂತಪ್ಪ ಕುರುಡಪ್ಪನವರ ಶಾಲೆಯ ಉಸ್ತುವಾರಿ ಅಧ್ಯಕ್ಷರು ಜಕಾಣಾಚಾರಿ ಮನ್ವಚಾರಿ, ಶಿಕ್ಷಕರಾದ ಚಂದ್ರಶೇಖರ ಮಡಿವಾಳರ, ಗೀತಾ ಕುರುಡಪ್ಪನವರ, ಮಂಜುಳಾ ಮಲ್ಲಾಪುರ, ರೇವಣಸಿದ್ದಪ್ಪ ಬಣಕಾರ, ಸುಜಾತಾ ವಿಜಾಪುರ, ಕೆ ಸುಮಾ, ಸರ್ವಮಂಗಳಾ ಹಿರೇವಡೆಯರ, ಮಹಮ್ಮದ ಹಾವನೂರ ಹಾಗೂ ರಾಜ್ಯ ಯುವ ಪ್ರಶಸ್ತಿ ಪುರಸ್ಕತರಾದ ಜಮಾಲಸಾಬ ತಾವರಗೊಂದಿ ಶಾಲಾ ಉಸ್ತುವಾರಿ ಸಮಿತಿಯವರು ಹಾಗೂ ಗ್ರಾಮಸ್ಥರು ಇದ್ದರು.

# ಎ.ಆರ್.ಜಿ. ಕಾಲೇಜಿನ ಎನ್‌ಸಿಸಿ ಘಟಕಕ್ಕೆ ಪ್ರಥಮ ಸ್ಥಾನ



ದಾವಣಗೆರೆ, ನ. 1: ರಾಜ್ಯೋತ್ಸವದ ಅಂಗವಾಗಿ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪರೇಡಿನಲ್ಲಿ, ಎ. ಆರ್. ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಎನ್‌ಸಿಸಿ ಘಟಕವು ತನ್ನ ಶಿಸ್ತು, ಸಮನ್ವಯ ಹಾಗೂ ಶ್ರೇಷ್ಠ ಪ್ರದರ್ಶನದಿಂದ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.




ದಾ ನಗರವಾಣಿ ಸುದ್ದಿ

ದಾವಣಗೆರೆ: ನಗರದ ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಡಾ. ರಾಘವೇಂದ್ರ ಆರ್ ಅವರಿಗೆ 2022– 23ನೇ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವ ಎಸ್ ಬಿ ಗಂಟಿ (ಆಡಳಿತ), ಡಾ. ರಮೇಶ್ ಸಿ.ಕೆ ಪರೀಕ್ಷಾಂಗ ಕುಲಸಚಿವ ಡಾ. ಅಶೋಕ್ ಕುಮಾರ್ ವಿ. ಪಾಳೇದ್, ಸಂಯೋಜನಾಧಿಕಾರಿ ಮಂಜುನಾಥ್, ಡಾ. ತಿಪ್ಪೇಸ್ವಾಮಿ, ಅಣ್ಣೇಶ್ ಮತ್ತು ಸ್ವಯಂಸೇವಕ ಸೇವಕಿಯರು ಹಾಜರಿದ್ದರು.



## 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

ಅಸಲು ದಾವೆ ನಂ.914/2024

ವಾದಿಯರು : ಮಲ್ಲಿಕಾರ್ಜುನ ಜಿ.ಆರ್. –: ವಿರುದ್ಧ :–

ಪ್ರತಿವಾದಿಯರುಗಳು : ಶೇಕಅಬುಸಾಲಿಯ ಮತ್ತು ಇನ್ನೊಬ್ಬರು

1ನೇ ಪ್ರತಿವಾದಿ : ಶ್ರೀಯುತ ಶೇಕಅಬುಸಾಲಿಯ ಬಿನ್ ಶೇಕ ಅಬು ತಾಹಿರ್, ಸುಮಾರು ವಯಸ್ಸು 33, #709/1/2/3. ಚಲುವಾದಿಕೇರಿ, ಹೊಂಡದ ಸರ್ಕಲ್ ರಸ್ತೆ, ದಾವಣಗೆರೆ.

**ಅರ್ಜಿಯನ್ನು ಆದೇಶ 5 ನಿಯಮ 20 ಮತ್ತು ಕಲಂ 151 ಸಿ.ಪಿ.ಸಿ. ಅಡಿಯಲ್ಲಿ ವಾದಿಯರ ಪರ ಸಲ್ಲಿಸಲಾಗಿದೆ.**

ಈ ಮೇಲ್ಕಂಡ ದಾವೆಯನ್ನು ವಾದಿಯರು ಆದೇಶ 7 ನಿಯಮ 1 ಮತ್ತು 2 ಸಿಪಿಸಿ ಅಡಿಯಲ್ಲಿ ಪ್ರತಿವಾದಿಯರ ವಿರುದ್ಧ 'ಘನ ನ್ಯಾಯಾಲಯದಲ್ಲಿ ಘೋಷನಾತ್ಮಕ ಹಾಗೂ ಕಡ್ಡಾಯ ತಡೆಯಾಜ್ಞೆ ಮತ್ತು ಶಾಶ್ವತ ತಡೆಯಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ 1ನೇ ಪ್ರತಿವಾದಿಯರು ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್ ಮತ್ತು ನೋಟೀಸ್ ಇತ್ಯಾದಿಯನ್ನು ತೆಗೆದುಕೊಳ್ಳದೆ ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದು ಸದರಿಯವರುಗಳ ಮೇಲೆ ಕಾನೂನ್ಮಕವಾಗಿ ನ್ಯಾಯಾಲಯದ ಸಮನ್ಸ್ ಜಾರಿಮಾಡುವಂತೆ ಸಾರ್ವಜನಿಕವಾಗಿ ಪತ್ರಿಕ ಪ್ರಕಟಣೆ ನೀಡಿದ್ದು ತಾವು ದಾವೆಯಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಲು ಘನ ನ್ಯಾಯಾಲಯದಲ್ಲಿ ಅರ್ಜಿಸಲ್ಲಿಸಿದ್ದು ಸದರಿ ಅರ್ಜಿಯನ್ನು ಪರಿಗಣಿಸಿ ದಿ: 23.10.2025 ಘನ ನ್ಯಾಯಾಲಯವು ಆದೇಶಮಾಡಿದ್ದು, ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರಾಗಲಿ ಹಾಜರಾಗಿ ತಮ್ಮ ಲಿಖಿತ ತಕರಾರನ್ನು ದಿ:19–12–2025 ಸಲ್ಲಿಸಲು ದಿನಾಂಕವನ್ನು ನೀಡಿರುತ್ತದೆ. ಆ ದಿನದಂದು ತಾವು ಹಾಜರಾಗದೇ ಹೋದಲ್ಲಿ ತಮ್ಮ ವಿರುದ್ಧ ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸಲಾಗುತ್ತದೆ ಎಂದು ತಿಳಿಯತಕ್ಕದ್ದು.

ನ್ಯಾಯಾಲಯದ ಆದೇಶ ಮತ್ತು ತಪಸೀಲುನೊಂದಿಗೆ 03/11/2025 ರಂದು ನೀಡಲಾಗಿದೆ. **ಘನ ನ್ಯಾಯಾಲಯದ ಮೊಹರಿನೊಂದಿಗೆ**

ಸಹಿ/– **ಶ್ರೀಯುತ ಯು.ಜಿ. ಪಾಟೀಲ್**
ವಕೀಲರು
ಶಿವಗಂಗಾ 1945ಎ/5, ಎಲ್.ಐ.ಸಿ. ಕಚೇರಿ ಹಿಂಭಾಗ ರಸ್ತೆ, ಪಿ.ಬಿ. ರಸ್ತೆ, ವಿನಾಯಕ ನಗರ, ದಾವಣಗೆರೆ.
ದಿ: 30–10–2025

ಸಹಿ/– **ಶಿರಸ್ತೇದಾರರು**
1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

## 3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

ಅಸಲು ದಾವೆ ನಂ.554/2025

ವಾದಿಯರು : ರಷೀದ ಅಹಮದ್ –: ವಿರುದ್ಧ :–

ಪ್ರತಿವಾದಿಯರುಗಳು : ಹುಸೇನಖಾನ ಮತ್ತು ಇತರರು

2ನೇ ಪ್ರತಿವಾದಿ : ಶ್ರೀಮತಿ ಲೀಲಾ ಕೋಂ. ತಿಪ್ಪೇಸ್ವಾಮಿ, ಸುಮಾರು ವಯಸ್ಸು 53, ವಾಸ : 798/7, ಮುಖ್ಯ ರಸ್ತೆ, ಆಜಾನಗರ, ದಾವಣಗೆರೆ.

3ನೇ ಪ್ರತಿವಾದಿ : ಶ್ರೀಯುತ ಸಯ್ಯದ್ ಮಹಮದ್, ಬಿನ್ ಸಯ್ಯದ್ ಅಬ್‌ದುಲ್ಲ ಖಲೀಮ್, ಸುಮಾರು ವಯಸ್ಸು 53, ಬುದ್ಧ, ಭೀಮ ನಗರ, ಹರಿಹರ ಟೌನ್, ದಾವಣಗೆರೆ ಜಿಲ್ಲೆ.

**ಅರ್ಜಿಯನ್ನು ಆದೇಶ 5 ನಿಯಮ 20 ಮತ್ತು ಕಲಂ 151 ಸಿ.ಪಿ.ಸಿ. ಅಡಿಯಲ್ಲಿ ವಾದಿಯರ ಪರ ಸಲ್ಲಿಸಲಾಗಿದೆ.**

ಈ ಮೇಲ್ಕಂಡ ದಾವೆಯನ್ನು ವಾದಿಯರು ಆದೇಶ 7 ನಿಯಮ 1 ಮತ್ತು 2 ಸಿಪಿಸಿ ಅಡಿಯಲ್ಲಿ ಪ್ರತಿವಾದಿಯರ ವಿರುದ್ಧ 'ಘನ ನ್ಯಾಯಾಲಯದಲ್ಲಿ ಘೋಷನಾತ್ಮಕ ಹಾಗೂ ಶಾಶ್ವತ ತಡೆಯಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ 2 ಮತ್ತು 3ನೇ ಪ್ರತಿವಾದಿಯರು ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್ ಮತ್ತು ನೋಟೀಸ್ ಇತ್ಯಾದಿಯನ್ನು ತೆಗೆದುಕೊಳ್ಳದೆ ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದು ಸದರಿಯವರುಗಳ ಮೇಲೆ ಕಾನೂನ್ಮಕವಾಗಿ ನ್ಯಾಯಾಲಯದ ಸಮನ್ಸ್ ಜಾರಿಮಾಡುವಂತೆ ಸಾರ್ವಜನಿಕವಾಗಿ ಪತ್ರಿಕ ಪ್ರಕಟಣೆ ನೀಡಿದ್ದು ತಾವು ದಾವೆಯಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಲು ಘನ ನ್ಯಾಯಾಲಯದಲ್ಲಿ ಅರ್ಜಿಸಲ್ಲಿಸಿದ್ದು ಸದರಿ ಅರ್ಜಿಯನ್ನು ಪರಿಗಣಿಸಿ ದಿ: 14.10.2025 ಘನ ನ್ಯಾಯಾಲಯವು ಆದೇಶಮಾಡಿದ್ದು, ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರಾಗಲಿ ಹಾಜರಾಗಿ ತಮ್ಮ ಲಿಖಿತ ತಕರಾರನ್ನು ದಿ:27–11–2025 ಸಲ್ಲಿಸಲು ದಿನಾಂಕವನ್ನು ನೀಡಿರುತ್ತದೆ. ಆ ದಿನದಂದು ತಾವು ಹಾಜರಾಗದೇ ಹೋದಲ್ಲಿ ತಮ್ಮ ವಿರುದ್ಧ ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸಲಾಗುತ್ತದೆ ಎಂದು ತಿಳಿಯತಕ್ಕದ್ದು.

ನ್ಯಾಯಾಲಯದ ಆದೇಶ ಮತ್ತು ತಪಸೀಲುನೊಂದಿಗೆ 31/10/2025 ರಂದು ನೀಡಲಾಗಿದೆ. **ಘನ ನ್ಯಾಯಾಲಯದ ಮೊಹರಿನೊಂದಿಗೆ**

ಸಹಿ/– **ಶ್ರೀಯುತ ಯು.ಜಿ. ಪಾಟೀಲ್**
ವಕೀಲರು
ಶಿವಗಂಗಾ 1945ಎ/5, ಎಲ್.ಐ.ಸಿ. ಕಚೇರಿ ಹಿಂಭಾಗ ರಸ್ತೆ, ಪಿ.ಬಿ. ರಸ್ತೆ, ವಿನಾಯಕ ನಗರ, ದಾವಣಗೆರೆ.
ದಿ: 30–10–2025

ಸಹಿ/– **ಶಿರಸ್ತೇದಾರರು**
1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

## ಗ್ರಾಮ ಪಂಚಾಯಿತಿ ಕಾರ್ಯಾಲಯ, ಬಿದರಕೆರೆ

ದಾವಣಗೆರೆ ಜಿಲ್ಲೆ. ಜಗಳೂರು ತಾಲ್ಲೂಕು.

ಕ್ರ.ಸಂ.ಗ್ರಾ.ಪಂ.ಬಿ/ಇ–ಪ್ರೋ/03/2025–26 ದಿನಾಂಕ: 02/11/2025

**ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ**

ಬಿದರಕೆರೆ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2025–26 ನೇ ಸಾಲಿನ ಬಿದರಕೆರೆ ಗ್ರಾಮ ಪಂಚಾಯಿತಿ 15 ನೇ ಹಣಕಾಸು ಯೋಜನೆಯಡಿ ಬಿದರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಕುಡಿಯುವ ನೀರಿನ ಸಾಮಗ್ರಿ ಖರೀದಿ, ಬೀದಿ ದೀಪ ಸಾಮಗ್ರಿ ಖರೀದಿ, ಕುಡಿಯುವ ನೀರಿನ ಮೋಟರ್ ದುರಸ್ತಿ ಹಾಗೂ ಅಗತ್ಯ ಸಾಮಾಗ್ರಿ ಖರೀದಿ ಮತ್ತು ನಿರ್ವಹಣೆ, ಚರಂಡಿ ಸ್ವಚ್ಛತೆಗಾಗಿ ಬೀಚಿಂಗ್ ಪೌಡರ್ ಮತ್ತು ಪೆನಾಯಿಲ್ ಖರೀದಿಗಾಗಿ ಒಟ್ಟು ಮೊತ್ತ ರೂ. 23.28847 ಲಕ್ಷಗಳಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಪ್ರೊಕ್ಯುರ್‌ಮೆಂಟ್ ಮೂಲಕ ಟೆಂಡರಗಾಗಿ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು, ಈ ಕೆಳಗಿನಂತೆ ಆಹ್ವಾನಿಸಲಾಗಿದ್ದು, (ಟೆಂಡರ್ ಸಂಖ್ಯೆ: RDPR/2025-26/IND12229, RDPR/2025-26/IND12226, RDPR/2025-26/IND12230, RDPR/2025-26/IND12232, RDPR/2025-26/SE3112) ಸದರಿ ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನುಈ ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in)ನಿಂದ ದಿನಾಂಕ: 02/11/2025 ರಿಂದ 17/11/2025 ಸಾಯಂಕಾಲ 5.00 ಗಂಟೆಯೊಳಗೆ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ: 17/11/2025 ಸಂಜೆ 5.00 ಗಂಟೆಯವರೆಗೆ ಇ–ಟೆಂಡರ್‌ನ್ನು ಸಲ್ಲಿಸಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬಿದರಕೆರೆ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ–1 ಮತ್ತು ಅನುಬಂಧ–2ನ್ನು) ಇ–ಪ್ರೊಕ್ಯುರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ & ಸಮಯ | ದಿನಾಂಕ: 02/11/2025 ರಿಂದ 17/11/2025 ಸಾಯಂಕಾಲ 5.00 ಗಂಟೆಯೊಳಗೆ |
| 2 | ಇ–ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಇಂಧೀಕರಿಸಲು ಕೊನೆಯ ದಿನಾಂಕ | ದಿನಾಂಕ: 17/11/2025 ಸಂಜೆ 5.00 ಗಂಟೆಯವರೆಗೆ |
| 3 | ಇ–ಪೋರ್ಟಲ್‌ನಲ್ಲಿ ದಾಖಾಲಾತಿಗಳ/ ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 18/11/2025 ಸಂಜೆ 5.15 ಗಂಟೆಯ ನಂತರ |
| 4 | ಇ–ಪೋರ್ಟಲ್‌ನಲ್ಲಿ ದಾಖಾಲಾತಿಗಳ/ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 18/11/2025 ಸಂಜೆ 5.30 ಗಂಟೆಯ ನಂತರ |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ಸಂಪರ್ಕಿಸಬಹುದಾಗಿದೆ.
ಅಧ್ಯಕ್ಷರು ಗ್ರಾಮ ಪಂಚಾಯಿತಿ, ಬಿದರಕೆರೆ. **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ** ಗ್ರಾಮ ಪಂಚಾಯಿತಿ, ಬಿದರಕೆರೆ.

**ಅಶೋಕ**
ದಿನ 4 ಆಟಗಳು
31-10-2025ರಿಂದ ಪ್ರಾರಂಭ
ಕನ್ನಡ ಚಿತ್ರ
ticket avabale bookmyshow
ಸಮಯ: ಬೆ:–11ಕ್ಕೆ, ಮ–2ಕ್ಕೆ ಸಂ–6ಕ್ಕೆ.: ರಾ–9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ**
ದಿನ 4 ಆಟಗಳು
ಭರ್ಜರಿ ಜನಭರಿತ 5ನೇ ವಾರ
ಕನ್ನಡ ಚಿತ್ರ




ರಿಷಬ್ ಶೆಟ್ಟಿ, ರುಕ್ಮಿಣಿ ವಸಂತ್ ನಟಿಸಿರುವ ಚಿತ್ರ:
ಕಾಂತಾರ ಅಧ್ಯಾಯ-1
bookmyshow
ಮತ್ತು ಪ್ರತಿದಿನ ಚಿತ್ರ ಮಂದಿರದಲ್ಲಿ ಮುಂಗಡವಾಗಿ ಟಿಕೆಟ್ ನೀಡಲಾಗುವುದು.
ಬಾಲ್ಕನಿ: 150 ರೂ
ಫಸ್ಟ್ ಕ್ಲಾಸ್: 120 ರೂ

# ಮುಂದಿನ ವರ್ಷ ಮಹಿಳೆಯರಿಗೆ ರಾಜ್ಯೋತ್ಸವದ ಪ್ರಶಸ್ತಿ ಹೆಚ್ಚಲಿ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಪುಷ್ಪ



ದಾ ನಗರವಾಣಿ ಸುದ್ದಿ

ಬೆಂಗಳೂರು: ನವಂಬರ್ 1ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕವಯಿತ್ರಿ ಡಾ. ಎಚ್.ಎಲ್. ಪುಷ್ಪ ಅವರಿಗೆ 2025ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ವಿತರಿಸಿದರು. ಪ್ರಶಸ್ತಿಯು 5 ಲಕ್ಷ ಮೊತ್ತ, 25 ಗ್ರಾಂ ಚಿನ್ನದ ಫಲಕ, ನೆನಪಿನ ಕಾಣಿಕೆ ಒಳಗೊಂಡಿದೆ. ಈ ಸಂದರ್ಭ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಉಪಸ್ಥಿತರಿದ್ದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಚಿತ್ರನಟ ಪ್ರಕಾಶ ರಾಜ್, ಎಚ್.ಎಲ್. ಪುಷ್ಪ ಮಾತಾಡಿದರು. ಪುಷ್ಪ ವೇದಿಕೆಯಲ್ಲಿ ಮುಖ್ಯಮಂತ್ರಿ ಹಾಗೂ ಸರ್ಕಾರಕ್ಕೆ ಕೃತಜ್ಞತೆ ಹೇಳಿ, ಈಸಾರಿ 13 ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ ಪ್ರಶಸ್ತಿ ನೀಡಿದ್ದೀರಿ, ಸಂತೋಷ. ಇದರಲ್ಲಿ ಸಮಾಜ ಕಡೆಗಣಿಸಿದ್ದ ಮಹಿಳೆಯರನ್ನು ಗುರ್ತಿಸಿದ್ದು ಸಂತೋಷ. ಮುಂದಿನ ವರ್ಷ ಈ ಪ್ರಶಸ್ತಿ ಇಮ್ಮಡಿಯಾಗಲಿ.

ಸರ್ಕಾರ ಸಮಾಜ ಸುಧಾರಕ, ಜಾತ್ಯಾತೀತ ಮನಸ್ಸಿನ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಅಭಿನಂದನೀಯ. ಅವರ ತತ್ವಾದರ್ಶ ರೂಢಿಸಿಕೊಂಡು ಎಲ್ಲ ಜನಾಂಗಕ್ಕು, ವಿಶೇಷವಾಗಿ ಮಹಿಳೆಯರಿಗೂ ಹಲವು ಭಾಗ್ಯ ಹಾಗೂ ಸೌಲಭ್ಯ ಕರುಣಿಸಿದ್ದಕ್ಕೆ ಧನ್ಯವಾದ ಎಂದೇಳಿದರು.

# ರಾಷ್ಟ್ರೀಯ ಸಮೂಹ ಗಾಯನ ಸ್ಪರ್ಧೆ ಮಯೂರ್ ಶಾಲೆ ಮಕ್ಕಳು ಪ್ರಥಮ



ದಾ ನಗರವಾಣಿ ಸುದ್ದಿ

ದಾವಣಗೆರೆ: ಈಚೆಗೆ ಬೆಂಗಳೂರಿನಲ್ಲಿ ಭಾರತ ವಿಕಾಸ ಪರಿಷದ್ ದಕ್ಷಿಣ ಪ್ರಾಂತ ಏರ್ಪಡಿಸಿದ್ದ ಕನ್ನಡ ದೇಶ ಭಕ್ತಿ ಗೀತೆಸ್ಪರ್ಧೆಯಲ್ಲಿದಾವಣಗೆರೆಯ ಮಯೂರ್ ಗ್ಲೋಬಲ್ ಶಾಲೆಯ ಮಕ್ಕಳು ಪ್ರಥಮ ಪ್ರಶಸ್ತಿ ಪಡೆದಿದ್ದಾರೆ.

ಶಾಲೆಯ ಟ್ರಸ್ಟಿ ಹಾಗೂ ಸಂಗೀತ ವಿದ್ವಾನ್ ಆನಂದ ಗೌಡ ಪಾಟೀಲ್ ಸಂಗೀತ ಗುರುಗಳಾಗಿ ತರಬೇತಿ ನೀಡಿದ್ದರು. ವಿದ್ಯಾರ್ಥಿಗಳಾದ ವಿರಾಟ್ ಎನ್ ನಾಡಿಗರ್, ಗೌರವ್ ರಜಪೂತ್, ಹರ್ಷಿತ ಎ.ಡಿ., ಪ್ರೇರಣ ಜಿ.ಎಸ್., ತನ್ಮಯ ಎನ್. ಎಂ, ಲಿಪಿಕಾ ಬಿಜೆ, ಲಹಾರಿಕಾ ಬೃಂದಾ ಕೆ.ಬಿ, ಹಾಗೂ ಪ್ರಜ್ಞಾ ಟಿಎಂ. ಸ್ಪರ್ಧೆಯಲ್ಲಿ ಭಾಗವಹಿಸಿದ್ದರು

# ಹಳೆ ಪಿಂಚಣಿ ಜಾರಿ ಹೋರಾಟ ನಿಲ್ಲುವುದಿಲ್ಲ ಸ.ನೌ.ಸಂಘದ ರಾಜ್ಯಾಧ್ಯಕ್ಷ: ಸಿ.ಎಸ್.ಷಡಕ್ಷರಿ



ದಾ.ನಗರವಾಣಿ ಸುದ್ದಿ

ದಾವಣಗೆರೆ.ನ.3: ಭಾಷಾಭಿಮಾನ ಕೇವಲ ಪದಗಳಲ್ಲಿ ವ್ಯಕ್ತವಾಗದೇ ನಮ್ಮ ನಡೆ-ನುಡಿ ಆಚರಣೆಗಳು ಮತ್ತು ಕ್ರಿಯಾತ್ಮಕ ಕಾರ್ಯಗಳಿಂದ ಅಭಿವ್ಯಕ್ತವಾಗಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ,ದಾವಣಗೆರೆ ಜಿಲ್ಲೆ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮವನ್ನು ಕುವೆಂಪು ಕನ್ನಡ ಭವನದಲ್ಲಿ ಉದ್ಘಾಟಿಸಿ ಮಾತನಾಡಿದರು.

ಪ್ರಪಂಚದ ಮೂರನೇ ಪ್ರಾಚೀನ ಭಾಷೆ ಎಂಬ ಹೆಗ್ಗಳಿಕೆ ಕನ್ನಡ ಬಾಷೆಗಿದ್ದು ನಾವೆಲ್ಲರೂ ನಮ್ಮ ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯದ ಉಳಿವಿಗಾಗಿ ಕಟಿಬದ್ಧರಾಗಬೇಕಿದೆ ಎಂದರು. ರಾಜ್ಯ ಸರ್ಕಾರಿ ನೌಕರರರಿಗಾಗಿ ಆರೋಗ್ಯ ಸಂಜೀವಿನಿ ಯೋಜನೆಯು ಜಾರಿಯಾಗಿದ್ದು, ಹೊಸ ಪಿಂಚಣಿ ಯೋಜನೆ ರದ್ದು ಮಾಡಿ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಸಂಘವು ಯಾವುದೇ ರೀತಿಯ ಹೋರಾಟಕ್ಕೂ ಬದ್ಧವಾಗಿದೆ ಎಂದರು.

ಪ್ರಸ್ತುತ ಕೃತಕ ಬುದ್ಧಿಮತ್ತೆ (ಎಐ) ಬಗ್ಗೆ ಈಗ ಸಾಕಷ್ಟು ಚರ್ಚೆ ನಡೆಯುತ್ತಿದೆ. ಹತ್ತು ಜನರು ಮಾಡುವ ಕೆಲಸ ಎಐ ಒಂದೇ ಮಾಡುತ್ತಿದೆ. ಹೀಗಾಗಿ ಯುವ ಜನರ ಮುಂದಿನ ಭವಿಷ್ಯದ ಬಗ್ಗೆ ಆತಂಕ ಎದುರಾಗಿದೆ. ಔದ್ಯೋಗಿಕಕ್ಷೇತ್ರದಲ್ಲಿ2-3 ದಶಕಗಳ ಹಿಂದೆ ಇರದಕಳವಳ ಪ್ರಸ್ತುತ ಎಲ್ಲರ ಮುಂದಿದೆ. ಕೃಷಿ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಎಐ ಕಾರುಬಾರು ಶುರುವಾಗಿದ್ದು, ಮುಂದಿನ ಭವಿಷ್ಯದ ಚಿಂತೆ ನಮ್ಮೆಲ್ಲರನ್ನೂ ಕಾಡುತ್ತಿದೆ. ಈಗಾಗಲೇ ಸಾಫ್ಟ್ ವೇರ್ ಕ್ಷೇತ್ರದಲ್ಲಿ ಉದ್ಯೋಗ ಕಡಿತಗೊಂಡಿದ್ದು, ಎಲ್ಲ ಕಡೆ ಎಐ ತನ್ನ ಕಬಂಧಬಾಹುಗಳನ್ನು ಚಾಚಿದೆ. ವಿದ್ಯಾರ್ಥಿಗಳು ಎಐ ಎದುರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕಿದೆ ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಾಮದೇವಪ್ಪ ಮಾತನಾಡಿ ಆದಿಕವಿ ಪಂಪನಾದಿಯಾಗಿ ಪ್ರಸ್ತುತ ದಿನಮಾನದವರೆಗೂ ಭಾಷೆ ಸ್ವಾಭಿಮಾನದ ಸಂಕೇತವಾಗಿದ್ದು, ಯುವ ಜನತೆ ಭಾಷೆಯ ರಾಯಭಾರಿಯಾಗುವಲ್ಲಿ ಕಾರ್ಯತತ್ಪರರಾಗಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಜಿಲ್ಲಾಧ್ಯಕ್ಷ ವೀರೇಶ್ ಎಸ್ ಒಡೇನಪುರ ಪ್ರಾಸ್ತಾವಿಕವಾಗಿ ಮಾತನಾಡಿ, ಭಾಷೆಗಳ ರಾಣಿ ಎಂದೇ ಕರೆಯಲ್ಪಡುವ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಎಲ್ಲರೂ ಶ್ರಮಿಸಬೇಕಿದೆ. ಕನ್ನಡ ನಾಡು -ನುಡಿಯ ಉಳಿವಿಗಾಗಿ ಸಂಘವು ಎಲ್ಲಾ ಸಹಕಾರ ನೀಡುವುದೆಂದರು.

ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಮಂಜುನಾಥ್ ಹೆಚ್.ಮಾತನಾಡಿ, ಪರಂಪರೆ ನಶಿಸದಂತೆ ತಡೆಯಲು ನಮ್ಮ ಮಾತೃಭಾಷಾ ಬಳಕೆ ವೃದ್ಧಿಯಾಗಬೇಕೆಂದರು. ರಾಜ್ಯೋತ್ಸವ ಕಾರ್ಯಕ್ರಮದ ಪ್ರಯುಕ್ತ ಏರ್ಪಡಿಸಿದ್ದ ಸಾಮೂಹಿಕ ನೃತ್ಯ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಸಂಘದ ತಾಲ್ಲೂಕು ಅಧ್ಯಕ್ಷರು, ರಾಜ್ಯ ಮತ್ತು ಜಿಲ್ಲಾ ಹಂತದ ಪದಾಧಿಕಾರಿಗಳು, ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ದಿಳ್ಯಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಬಿ.ಪಾಲಾಕ್ಷಿ ಸ್ವಾಗತಿಸಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಂಜುನಾಥ ಹೆಚ್.ಎಸ್.ನಿರೂಪಿಸಿದರು.

# ಪವರ್ ಲಿಫ್ಟಿಂಗ್ ಸ್ಪರ್ಧೆ: ಸಂತೋಷ ಕುಮಾರ್. ಎಂ ರಾಷ್ಟ್ರಮಟ್ಟಕ್ಕೆ ಆಯ್ಕೆ



ದಾ ನಗರವಾಣಿ ಸುದ್ದಿ

ಹರಿಹರ: ಮಂಗಳೂರಿನಲ್ಲಿ ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಅ.24 ರಿಂದ 26ರವರೆಗೆ ಆಯೋಜಿಸಿದ್ದ ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯ ಮಹಿಳಾ ಜ್ಯೂನಿಯರ್ ಕ್ಲಾಸಿಕ್ ಬೆಂಚ್ ಪ್ರೆಸ್ 83 ಕೆ.ಜಿ.ವಿಭಾಗದಲ್ಲಿ ತೃತಿಯ ಸ್ಥಾನ ಹಾಗೂ ಇಕ್ವಿಪ್ಡ್ ಬೆಂಚ್ ಪ್ರೆಸ್ ಸ್ಪರ್ಧೆಯಲಿ ಹರಿಹರದ ಸಂತೋಷಕುಮಾರ್.ಎಂ ದ್ವಿತೀಯಸ್ಥಾನ ಪಡೆದು 2026ರ ಜನವರಿ ತಿಂಗಳಲ್ಲಿ ಹರಿಯಾಣದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

# ಪವರ್ ಲಿಫ್ಟಿಂಗ್ ಸ್ಪರ್ಧೆ: ತನುಶ್ರೀ ರಾಷ್ಟ್ರಮಟ್ಟಕ್ಕೆ ಆಯ್ಕೆ



ದಾ ನಗರವಾಣಿ ಸುದ್ದಿ

ಹರಿಹರ: ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮತ್ತು ದ.ಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮಂಗಳೂರು ಇವರ ಸಹಯೋಗದಲ್ಲಿ ಅ.24 ರಿಂದ 26ರವರೆಗೆ ಮಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯ ಮಹಿಳಾ ಜ್ಯೂನಿಯರ್ ಕ್ಲಾಸಿಕ್ ಬೆಂಚ್ ಪ್ರೆಸ್ 57 ಕೆ.ಜಿ.ವಿಭಾಗದಲ್ಲಿ ಹಾಗೂ 57 ಕೆ.ಜಿ.ಜ್ಯೂನಿಯರ್ ಇಕ್ವಿಪ್ಡ್ ಬೆಂಚ್ ಪ್ರೆಸ್ ವಿಭಾಗದಲ್ಲಿ ಹರಿಹರದ ಆರ್ ಫಿಟ್ನೆಸ್ ಸಂಸ್ಥೆಯ ತನುಶ್ರೀ ವೈ.ಕಲ್ಯಾಣಕರ್ ಪ್ರಥಮ ಸ್ಥಾನ ಪಡೆದು 2026 ಜನವರಿ ತಿಂಗಳಲ್ಲಿ ಹರಿಯಾಣದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

# ನಗರದಲ್ಲಿ ಹಂದಿಗಳನ್ನು ಬಿಡಾಡಿಯಾಗಿ ಅಲೆಯಲು ಬಿಡುವವರ ಮೇಲೆ ಕ್ರಮ

ದಾವಣಗೆರೆ ನವಂಬರ್-3 : ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬಿಡಾಡಿ ಹಂದಿಗಳ ಹಾವಳಿ ಹೆಚ್ಚಾಗಿದ್ದು, ನಿಫಾ ವೈರಸ್, ಎಚ್.ಎನ್1 ಹಾಗೂ ಇನ್ನಿತರ ಸಾಂಕ್ರಮಿಕ ಖಾಯಿಲೆಗಳ ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ, ನಗರದ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಪಾಲಿಕೆ ವ್ಯಾಪ್ತಿಯಲ್ಲಿರುವ ಬಿಡಾಡಿ ಹಂದಿಗಳನ್ನು ನಿಯಂತ್ರಿಸುವುದು ಅವಶ್ಯವಿರುತ್ತದೆ.

ಮಹಾನಗರ ಪಾಲಿಕೆಯ ಅನುಮತಿಯಿಲ್ಲದೆ ಹಂದಿಗಳ ಸಾಕಣೆ ಮಾಡುವುದು ಹಾಗೂ ಸಾರ್ವಜನಿಕರಿಗೆ ಉಪದ್ರವಕಾರಿಯಾಗುವಂತೆ ಬಿಡಾಡಿಯಾಗಿ ಅಲೆಯಲು ಬಿಡುವುದು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದನ್ವಯ ಉಲ್ಲಂಘನೆಯಾಗಿರುತ್ತದೆ.

ನಗರದಲ್ಲಿ ಸಾರ್ವಜನಿಕರಿಗೆ ಉಪದ್ರವಕಾರಿಯಾಗುವಂತೆ ಬಿಡಾಡಿಯಾಗಿ ಅಲೆಯುತ್ತಿರುವ ಹಂದಿಗಳನ್ನು ಹಿಡಿದು ಸೂಕ್ತ ಸೌಲಭ್ಯಗಳನ್ನು ಒದಗಿಸಿ ಪಾಲಿಕೆ ಅನುಮತಿಯೊಂದಿಗೆ ಸಾಕಣೆ ಮಾಡಬೇಕು. ತಪ್ಪಿದಲ್ಲಿ ಸಾರ್ವಜನಿಕ ಆರೋಗ್ಯ ಕಾಪಾಡುವ ಹಿತದೃಷ್ಠಿಯಿಂದ ಸಾರ್ವಜನಿಕರಿಗೆ ಉಪದ್ರವವಾಗುವಂತೆ ಅಲೆಯುತ್ತಿರುವ ಬಿಡಾಡಿ ಹಂದಿಗಳನ್ನು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದನ್ವಯ ಕ್ರಮವಹಿಸಲಾಗುವುದು. ಹಾಗೂ ಇದರಿಂದ ಉಂಟಾಗುವ ಯಾವುದೇ ನಷ್ಟಗಳಿಗೆ ಪಾಲಿಕೆ ಜವಾಬ್ದಾರಿಯಾಗುವುದಿಲ್ಲ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

# ಕುಂದುವಾಡ ಕೆರೆಯಲ್ಲಿ ಮೀನುಗಳ ಮರಣ ಸಾರ್ವಜನಿಕರು ಗಾಬರಿಪಡುವ ಅವಶ್ಯಕತೆ ಇಲ್ಲ

ದಾವಣಗೆರೆ ನವಂಬರ್-3 – ಅಕ್ಟೋಬರ್ 30 ರಂದು ನಗರದ ಕುಂದುವಾಡ ಕೆರೆಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಕಳೆದ ವಾರದಲ್ಲಿ ದಾವಣಗೆರೆ ಜಿಲ್ಲೆಯಾದ್ಯಂತ ಹೆಚ್ಚಿನ ಮಳೆಯಿಂದಾಗಿ ಕುಂದುವಾಡ ಕೆರೆಗೆ ಅತಿಯಾದ ನೀರು ಹೊರಗಡೆಯಿಂದ ಪೈಪ್‌ಲೈನ್ ಮೂಲಕ ಬಂದು ನೀರು ಶೇಖರಣೆಯಾಗಿರುವ ಕಾರಣ ನೀರಿನಲ್ಲಿ ಆಮ್ಲಜನಕದ ಏರುಪೇರು ಮತ್ತು ನೀರಿನಲ್ಲಿನ ಸಣ್ಣ ಹುಲ್ಲು ಮೀನಿನ ಕಿವಿರಿಗೆ ಸೇರಿ ಶ್ವಾಸ ಬಂಧಿಸುವಿಕೆ (ಗಿಲ್ ಚೌಕ್)ನಿಂದ ಉಸಿರಾಟದ ತೊಂದರೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು 10 ರಿಂದ 15 ಮೀನುಗಳು ಸತ್ತು ಕೆರೆಯ ದಡದಲ್ಲಿ ತೇಲುತ್ತಿರುವುದು ಕಂಡುಬಂದಿರುತ್ತದೆ.

ಇದು ಆಮ್ಲಜನಕರ ಏರುಪೇರಿನಿಂದ ಮೀನುಗಳ ಮರಣ ಹೊಂದಿದ್ದು ಸಾರ್ವಜನಿಕರು ಗಾಬರಿಪಡುವ ಅವಶ್ಯಕತೆ ಇರುವುದಿಲ್ಲ ಎಂದು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಎರಡು ಪ್ರತ್ಯೇಕ ಆನ್‌ಲೈನ್ ವಂಚನೆ ಪ್ರಕರಣ ಶಿಕ್ಷಕ ಸೇರಿ ಇಬ್ಬರಿಗೆ 50 ಲಕ್ಷಕ್ಕೂ ಅಧಿಕ ಮೋಸ

ದಾ ನಗರವಾಣಿ ಸುದ್ದಿ

ದಾವಣಗೆರೆ.ನ.3: ಟ್ರೇಡಿಂಗ್ ಕಂಪನಿಗಳ ಹೆಸರಿನಲ್ಲಿ ಆನ್‌ಲೈನ್ ಮೂಲಕ ಹಣ ಹೂಡಿಕೆ ಮಾಡಿದ ವ್ಯಕ್ತಿಯೋರ್ವ 42.51 ಲಕ್ಷ ಕಳೆದುಕೊಂಡರೆ, ಶಿಕ್ಷಕನೊಬ್ಬ ಹೊಸ ಕಂಪನಿಯಲ್ಲಿ ಷೇರು ಹೂಡಿಕೆ ಮಾಡಿದರೆ ಲಾಭಗಳಿಸಬಹುದೆಂದು 11.93 ಲಕ್ಷ ರೂಪಾಯಿ ಕಳೆದುಕೊಂಡು ಘಟನೆ ದಾವಣಗೆರೆ ಜಿಲ್ಲೆಯಲ್ಲಿ ನಡೆದಿದೆ.

ದಾವಣಗೆರೆ ನಗರದ ಕೆ.ಬಿ.ಬಡಾವಣೆಯ ನಿವಾಸಿಯೊಬ್ಬರು ಮೊಬೈಲ್ ರಿಪೇರಿ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದರು. ಇದೀಗ ಲಾಭದ ಆಸೆಗೆ ಬಿದ್ದು ಆನ್‌ಲೈನ್ ಮೂಲಕ 42.51 ಲಕ್ಷ ಕಳೆದುಕೊಂಡಿದ್ದಾರೆ. ಫೇಸ್‌ಬುಕ್‌ನಲ್ಲಿ ಕಂಡ ಲಿಂಕ್ ಒತ್ತಿದ್ದ ಅವರ ಮೊಬೈಲ್ ನಂಬರ್‌ನ್ನು ವಾಟ್ಸಪ್ ಗ್ರೂಪಿಗೆ ಸೇರಿಸಿದ ಖದೀಮರು, ಬಳಿಕ ಟ್ರೇಡಿಂಗ್ ಕಂಪನಿಯಲ್ಲಿ ಬಂಡವಾಳ ಹೂಡಿದರೆ ಹೆಚ್ಚಿನ ಲಾಭಾಂಶಗಳಿಸಬಹುದು ಎಂದು ನಂಬಿಕೆ ಹುಟ್ಟಿಸಿದ್ದಾರೆ.

ಖದೀಮರ ಮಾತು ನಂಬಿದ ಆತ, ತಾನು ದುಡಿದ ಹಣದ ಜೊತೆಗೆ ಪತ್ನಿ, ತಂಗಿ, ತಾಯಿಯ ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲ ಪಡೆದು ಆನ್‌ಲೈನ್ ಮೂಲಕ ವಂಚಕರ ಖಾತೆಗೆ ಹಣ ಜಮೆ ಮಾಡಿದ್ದಾನೆ. ಬಳಿಕ ತಾನು ಹೂಡಿಕೆ ಮಾಡಿದ ಹಣ ವಾಪಸ್ಸು ಪಡೆಯಲು ಸಾಧ್ಯವಾಗದೇ ಇದ್ದಾಗ ತಾನು ಮೋಸ ಹೋಗಿದ್ದು ಗೊತ್ತಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹೊನ್ನಾಳಿಯ ಶಿಕ್ಷಕರೊಬ್ಬರಿಗೆ ಹೊಸ ಕಂಪನಿಗಳಲ್ಲಿ ಷೇರು ಹೂಡಿಕೆ ಮಾಡಿದರೆ ತಿಂಗಳಿಗೆ 300 ರಷ್ಟು ಲಾಭಗಳಿಸಬಹುದು ಎಂದು ನಂಬಿಸಿ 11.93 ಲಕ್ಷ ರೂಪಾಯಿ ವಂಚನೆ ಮಾಡಿದ್ದಾರೆ. ವಾಟ್ಸ್‌ಪ್ ಗ್ರೂಪಿಗೆ ಶಿಕ್ಷಕನ ಮೊಬೈಲ್ ಸಂಖ್ಯೆ ಸೇರಿಸಿದ ವಂಚಕರು, ಷೇರು ಹೂಡಿಕೆಗೆ ಉತ್ತೇಜಿಸಿದ್ದು ಇದನ್ನು ನಂಬಿದ ಶಿಕ್ಷಕ, ಖದೀಮರು ನೀಡಿದ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಹಂತ ಹಂತವಾಗಿ ಹಣ ಜಮಾ ಮಾಡಿದ್ದಾನೆ. ಕೊನೆಗೆ ಹಣ ಬಿಡಿಸಿಕೊಳ್ಳಲು ಆಗದೇ ಇದ್ದಾಗ ಮೋಸ ಹೋಗಿದ್ದು ಗೊತ್ತಾಗಿದೆ. ದಾವಣಗೆರೆ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದು ಪೊಲೀಸರು ತನಿಖೆ ಆರಂಭಿಸಿದ್ದಾರೆ

# ರಾಣೆಬೆನ್ನೂರು: ವಿಜೃಂಭಣೆಯಿಂದ ಜರುಗಿದ ಶ್ರೀ ದೇವಾಂಗ ದೇವಲ ಮಹರ್ಷಿ ಮೆರವಣಿಗೆ



ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು,ನ. 03: ತಾಲೂಕ ದೇವಾಂಗ ಸೇವಾ ಸಂಘದ ವತಿಯಿಂದ ಶ್ರೀ ದೇವಾಂಗ ದೇವಲ ಮಹರ್ಷಿ ಜಯಂತ್ಯೋತ್ಸವ ಅಂಗವಾಗಿ ಶ್ರೀ ದೇವಾಂಗ ದೇವಲ ಮಹರ್ಷಿ ಭಾವಚಿತ್ರ ಮೆರವಣಿಗೆ ಬಹು ವಿಜೃಂಭಣೆಯಿಂದ ಜರುಗಿತು.

ನಗರದ ಕುರುಬಗೇರಿ ಕುದುರಿಗಲ್ಲಿಯ ಶ್ರೀ ಬನಶಂಕರಿ ದೇವಿ ದೇವಸ್ಥಾನದಿಂದ ಮುಂಜಾನೆ 8 ಗಂಟೆಯಿಂದ ಪ್ರಾರಂಭವಾದ ಮೆರವಣಿಗೆಗೆ ಸುಮಂಗಲೆಯರ ಆರತಿ, ಭಾಜಾ-ಭಜಂತ್ರಿ, ಸಮಾಳ ಮೆರಗು ತಂದಿತು. ನಂತರ ಕುರುಬಗೇರಿ ಕ್ರಾಸ್, ದುರ್ಗಾ ಸರ್ಕಲ್, ಎಮ್.ಜಿ ರಸ್ತೆ, ಚಕ್ಕಿಮಿಕ್ಕಿ ಸರ್ಕಲ್, ತಳವಾರ ಗಲ್ಲಿಯಿಂದ ದೊಡ್ಡಪೇಟೆಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ತಲುಪಿತು. ನಂತರ ಪೂಜೆ, ಪ್ರಾರ್ಥನೆ ಹಾಗೂ ವಸ್ತ್ರದಾನ ಕಾರ್ಯಕ್ರಮ ಜರುಗಿತು. ಅಲ್ಲಿಂದ ಮರಳಿ ಕುದುರಿಗಲ್ಲಿಯ ದೇವಸ್ಥಾನಕ್ಕೆ ಆಗಮಿಸಿತು. ಮಧ್ಯಾಹ್ನ 01ಗಂಟೆಗೆ ಅನ್ನಸಂತರ್ಪಣೆ ನಡೆಯಿತು.

ದೇವಾಂಗ ಸಮಾಜ ಅಧ್ಯಕ್ಷ ಬಸವರಾಜ ಲಕ್ಷ್ಮೇಶ್ವರ, ಕಲವೀರಪ್ಪ ಪೂಜಾರ, ಬಸವರಾಜ ಮೈಲಾರ, ಸಂಕಪ್ಪ ಮಾರನಾಳ, ಅಶೋಕ ದುರ್ಗಶೀಮಿ, ಮನೋಹರ ಲಕ್ಷ್ಮೇಶ್ವರ, ಗಿರಿಧರ ಗುಳೇದಗುಡ್ಡ, ರಮೇಶ ದುರ್ಗದಶೀಮಿ, ಗಣೇಶ ಹಾವನೂರ, ನಾಗರಾಜ ಲಕ್ಷ್ಮೇಶ್ವರ, ಈರಣ್ಣ ಕೋಳಿವಾಡ ಸೇರಿದಂತೆ ಮತ್ತಿತರು ಇದ್ದರು.

# ಸರ್ಕಾರಿ ಶಾಲಾ ಕಾಲೇಜಿನಲ್ಲಿ ಆರ್.ಎಸ್.ಎಸ್ ಕಾರ್ಯಕ್ರಮ ನಿಷೇಧ ಸ್ವಾಗತಾರ್ಹ: ಯಾದವರೆಡ್ಡಿ



ದಾ.ನಗರವಾಣಿ ಸುದ್ದಿ,

ಜಗಳೂರು, ನ.3: ಆರ್.ಎಸ್.ಎಸ್ ಸಂಘಟನೆ ಕಾರ್ಯಕ್ರಮಗಳನ್ನು ಸರಕಾರಿ ಶಾಲಾ, ಕಾಲೇಜುಗಳಲ್ಲಿ ನಡೆಸಲು ನಿಷೇಧಿಸಿರುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಸುತ್ತೋಲೆ ಹೊರಡಿಸಿರುವುದನ್ನು ಸ್ವಾಗತಿಸುತ್ತೇನೆ. ಅದೊಂದು ಮೂಲಭೂತವಾದ ಸಂಘಟನೆ ಎಂದು ಸರ್ವೋದಯ ಕರ್ನಾಟಕ ಪಕ್ಷದ ಉಪಾಧ್ಯಕ್ಷ ಯಾದವರೆಡ್ಡಿ ಹೇಳಿದರು.

ಪಟ್ಟಣದ ಪತ್ರಿಕಾಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಆರ್.ಎಸ್.ಎಸ್ ಸಂಘಟನೆ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಮಾಧವ ಸದಾಶಿವ ಗೋಲ್ವಾಲ್ಕರ್ ಬರೆದುಕೊಂಡತೆ ಆರ್.ಎಸ್.ಎಸ್ ಮನುಸ್ಮೃತಿಗೆ ಮನ್ನಣೆ ನೀಡುತ್ತೇವೆ ಎಂದು ಹೇಳಿದ್ದಾರೆ ಎಂದರು.

ಸ್ವಾಮಿ ವಿವೇಕಾನಂದ ನಂತರ ಅವರ ಇಚ್ಛೆಯಂತೆ ದೇಶವನ್ನು ಪ್ರೀತಿಸುವ ಲಕ್ಷ ಲಕ್ಷ ಯುವಕರನ್ನು ದೇಶಕ್ಕೆ ಕೊಟ್ಟ ಕೀರ್ತಿ ಎಂದು ಹೇಳಿಕೊಳ್ಳುವ ಡಾ ಹೆಡಗೇವಾರ್ ಪ್ರತಿಪಾದಿಸಿದ್ದಾರೆ. ಆದರೆ ಆರ್‌ಎಸ್‌ಎಸ್ ಸಮಾಜದಲ್ಲಿ ನಾಲ್ಕುವರ್ಣ ಪದ್ಧತಿಯ ಅನುಷ್ಠಾನಕ್ಕಾಗಿ ನಡೆಸುತ್ತಿರುವ ಹುನ್ನಾರ, ಮನುಸ್ಮೃತಿಯ ಜಾರಿ, ಸಾಮಾಜಿಕ ನ್ಯಾಯದ ವಿರೋಧಿ ಮನಸ್ಥಿತಿಯನ್ನು ಅನಾವರಣಗೊಳಿಸುತ್ತಿದೆ ಎಂದರು.

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದಂತೆ ರಾಮಜನ್ಮ ಭೂಮಿ ಸ್ಥಾಪನೆಯಾದ ದಿನ ನಮಗೆ ಸ್ವಾತಂತ್ರ್ಯ ಬಂದಿದೆ ಎಂದು ಹೇಳಿಕೊಂಡಿದ್ದಾರೆ. ಕೇಸರಿ ಧ್ವಜವೇ ನಮ್ಮ ಬಾವುಟ ಎಂದು ಹೇಳಿಕೊಂಡಿದ್ದಾರೆ. ರಾಷ್ಟ್ರಧ್ವಜ, ರಾಷ್ಟ್ರಗೀತೆ ವಿರೋಧಿಸುತ್ತಾರೆ. ಪುರಾತನ ಪರಂಪರೆ ಜೀವಂತವಾಗಿಡಬೇಕು ಮತ್ತು ಪ್ರಜಾಪ್ರಭುತ್ವ ಮೂಲ ಆಶಯಗಳಿಗೆ ಧಕ್ಕೆ ತರುವುದೇ ಸಂಘದ ಮೂಲ ಉದ್ದೇಶವಾಗಿದೆ ಎಂದು ಆರೋಪಿಸಿದರು.

ಆರ್‌ಎಸ್‌ಎಸ್ ಗುಪ್ತ ಸೂಚಿಗಳು ಜನ ಸಾಮಾನ್ಯರಿಗೆ ತಿಳಿಯುತ್ತಿಲ್ಲ. ಯಾವುದೇ ಸಂಘಟನೆ, ಸಂಘ ಸಂಸ್ಥೆಗಳಿಗೆ ವಾರ್ಷಿಕ ದೇಣಿಗೆ ಲೆಕ್ಕವಿರುತ್ತದೆ. ಆದರೆ ಗುರು ಕಾಣಿಕೆ ಹೆಸರಿನಲ್ಲಿ ಆರ್‌ಎಸ್‌ಎಸ್ ತೆಗೆದುಕೊಳ್ಳುವ ದೇಣಿಗೆ ಲೆಕ್ಕ ಪತ್ರವೇ ಇಲ್ಲ. ಲೆಕ್ಕ ಪತ್ರ ಕೊಡದೇ ಇರುವ ಬೇನಾಮಿ ಸಂಘಟನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಕೀಲ ಆರ್.ಓಬಳೇಶ್, ದಲಿತ ಸಂಘಟನೆ ತಾ.ಸಂಚಾಲಕ ಮಲೆ ಮಾಚಿಕೆರೆ ಸತೀಶ್, ತಿಪ್ಪೇಸ್ವಾಮಿ, ಅನಂತರಾಜ್ ಸೇರಿದಂತೆ ಇತರರು ಇದ್ದರು.

# ಸತೀಶ್ ಜಾರಕಿಹೊಳಿ ದಿಢೀರ್ ದೆಹಲಿಗೆ: ಕುತೂಹಲ

(1ನೇ ಪುಟದಿಂದ) ಸತೀಶ್ ಜಾರಕಿಹೊಳಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿದ್ದು, ದೆಹಲಿ ಭೇಟಿ ವೇಳೆ ಕೆಪಿಸಿಸಿ ಅಧ್ಯಕ್ಷ ಹುದ್ದೆಗೆ ಬೇಡಿಕೆ ಇಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಉಪಮುಖ್ಯಮಂತ್ರಿ ಮತ್ತು ಹಾಲಿ ಕೆಪಿಸಿಸಿ ಮುಖ್ಯಸ್ಥ ಡಿಕೆ ಶಿವಕುಮಾರ್ ಅವರು ನವೆಂಬರ್ 11 ರಂದು ರಾಷ್ಟ್ರ ರಾಜಧಾನಿಗೆ ಭೇಟಿ ನೀಡಲಿದ್ದು, ಇದಕ್ಕೂ ಮುನ್ನ ಸತೀಶ್ ಅವರು ದೆಹಲಿಗೆ ಭೇಟಿ ನೀಡಿರುವುದು ಕುತೂಹಲ ಸೃಷ್ಟಿಸಿದೆ. ಹೈಕಮಾಂಡ್ ಕೆಪಿಸಿಸಿ ಹುದ್ದೆ ನೀಡಿದ್ದೇ ಆದರೆ, ಸತೀಶ್ ಅವರು ಸಚಿವ ಸ್ಥಾನ ತ್ಯಾಗ ಮಾಡಲು ಸಿದ್ಧರಿದ್ದು, ಈಗಾಗಲೇ ಈ ಸಂದೇಶವನ್ನು ಖರ್ಗೆಯವರಿಗೆ ತಲುಪಿಸಿದ್ದಾರೆಂದು ಪಕ್ಷದ ಮೂಲಗಳು ಮಾಹಿತಿ ನೀಡಿವೆ.

ನವೆಂಬರ್ 14 ರಂದು ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಸತೀಶ್ ಅವರ ಹೈಕಮಾಂಡ್ ನಾಯಕರೊಂದಿಗಿನ ಸಭೆ ಮಹತ್ವ ಪಡೆದುಕೊಂಡಿದೆ.

ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಸಂದೇಶವನ್ನು ಸತೀಶ್ ಹೈಕಮಾಂಡ್‌ಗೆ ತಿಳಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಏತನ್ಮಧ್ಯೆ, ಸತೀಶ್ ಜಾರಕಿಹೊಳಿಯವರ ದೆಹಲಿ ಭೇಟಿಯನ್ನು ರಾಜಕೀಯಗೊಳಿಸಬಾರದು ಎಂದು ಡಿಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ರಾಜಕಾರಣಿಗಳು ಅನೇಕ ಕಾರ್ಯಕ್ರಮಗಳಿಗಾಗಿ ದೆಹಲಿಗೆ ಭೇಟಿ ನೀಡುತ್ತಾರೆ. ನಾನು ನವೆಂಬರ್ 5 ಮತ್ತು 6 ರಂದು ಬಿಹಾರಕ್ಕೆ ಪ್ರಯಾಣಿಸುತ್ತಿದ್ದೇನೆ. ಕೇಂದ್ರ ನಗರಾಭಿವೃದ್ಧಿ ಸಚಿವರು ನನ್ನನ್ನು ಸಭೆಗೆ ಕರೆದಿದ್ದಾರೆ. ನಂತರ ಕಾವೇರಿ ಜಲ ನ್ಯಾಯಮಂಡಳಿ ತೀರ್ಪು ಇದೆ. ಈ ಭೇಟಿಗಳನ್ನು ರಾಜಕೀಯಗೊಳಿಸಬಾರದು ಎಂದು ತಿಳಿಸಿದ್ದಾರೆ.

ಏತನ್ಮಧ್ಯೆ ಖರ್ಗೆ ಸತೀಶ್ ಅವರಿಗೆ ಅಪಾಯಿಂಟ್ಮೆಂಟ್ ನೀಡಿದ್ದರ ಕುರಿತು ಪ್ರತಿಕ್ರಿಯೆ ನೀಡಿರುವ ಆರ್‌ಡಿಪಿಆರ್ ಮತ್ತು ಐಟಿ/ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಇದು ಯಾವುದೇ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಎಐಸಿಸಿ ಅಧ್ಯಕ್ಷರಲ್ಲದಿದ್ದರೆ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಸತೀಶ್ ಜಾರಕಿಹೊಳಿಗೆ ಅಪಾಯಿಂಟ್‌ಮೆಂಟ್ ನೀಡುತ್ತಾ-ರೆಯೇ? ಅವರ ದೆಹಲಿ ಭೇಟಿಯ ಹಿಂದೆ ಅಧಿಕೃತ ಕೆಲಸಗಳನ್ನು ಹೊರತುಪಡಿಸಿ ಯಾವುದೇ ರಹಸ್ಯ ಕಾರ್ಯಸೂಚಿ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ.

# ಪಾಕಿಸ್ತಾನಕ್ಕೆ ಭಾರತದ ಪರಮಾಣು ಶಸ್ತ್ರಾಸ್ತ್ರಗಳ...

(1ನೇ ಪುಟದಿಂದ) ಜಮ್ಶೆಡ್‌ಪುರದ ನಿವಾಸಿ ಹುಸೇನಿ ಅವರಿಂದ 10 ಕ್ಕೂ ಹೆಚ್ಚು ನಕ್ಷೆಗಳು ಮತ್ತು ಪರಮಾಣು ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಡೇಟಾವನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಹಲವಾರು ನಕಲಿ ಪಾಸ್‌ಪೋರ್ಟ್‌ಗಳು, ಆಧಾರ್ ಮತ್ತು ಪ್ಯಾನ್ ಕಾರ್ಡ್‌ಗಳು ಮತ್ತು ನಕಲಿ ಐಡಿಯನ್ನು ಸಹ ವಶಪಡಿಸಿಕೊಳ್ಳಲಾಗಿದೆ. ಒಂದು ಐಡಿ ಈ ವ್ಯಕ್ತಿಯನ್ನು ಅಲಿ ರಜಾ ಹುಸೇನ್ ಎಂದು ಗುರುತಿಸಿದರೆ. ಇನ್ನೊಂದು ಐಡಿಯಲ್ಲಿ ಅಲೆಕ್ಸಾಂಡರ್ ಪಾಮರ್ ಎಂದು ಹೆಸರಿಸಲಾಗಿದೆ. ಇನ್ನು ಹುಸೇನಿಯ ಸಹೋದರ ಆದಿಲ್ ಅವರನ್ನು ದೆಹಲಿಯಲ್ಲಿ ಬಂಧಿಸಲಾಗಿದೆ.

ಮುಂಬೈ ಪೊಲೀಸರ ಅಪರಾಧ ವಿಭಾಗದ ಮೂಲಗಳ ಪ್ರಕಾರ, ಹುಸೇನಿ ಸಹೋದರರು 1995 ರಲ್ಲಿ ವಿದೇಶಿ ಹಣವನ್ನು ಸ್ವೀಕರಿಸಲು ಪ್ರಾರಂಭಿಸಿದ್ದರು. ಆರಂಭದಲ್ಲಿ, ಅವರಿಗೆ ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿತ್ತು, ಆದರೆ 2000 ರ ನಂತರ, ಅವರಿಗೆ ಕೋಟಿಗಳನ್ನು ನೀಡಲಾಯಿತು. ಬಿಎಆರ್‌ಸಿ ಮತ್ತು ಇತರ ಪರಮಾಣು ಸ್ಥಾವರಗಳಿಗೆ ಸಂಬಂಧಿಸಿದ ರಹಸ್ಯ ನೀಲನಕ್ಷೆಗಳಿಗೆ ಬದಲಾಗಿ ಈ ಹಣವನ್ನು ಪಾವತಿಸಲಾಗಿದೆ ಎಂದು ಶಂಕಿಸಲಾಗಿದೆ.

ತನಿಖೆಯ ಸಮಯದಲ್ಲಿ, ಪೊಲೀಸರು ಅಖ್ತರ್ ಹುಸೇನಿ ಹೆಸರಿನಲ್ಲಿ ಖಾಸಗಿ ಬ್ಯಾಂಕ್ ಖಾತೆಯನ್ನು ಸಹ ಪತ್ತೆಹಚ್ಚಿದರು, ಅದು ಅನುಮಾನಾಸ್ಪದ ವಹಿವಾಟುಗಳನ್ನು ಕಂಡಿತ್ತು. ನಿಖರವಾದ ಮೊತ್ತ ಮತ್ತು ಹಣಕಾಸಿನ ಮೂಲವನ್ನು ಪತ್ತೆ ಮಾಡಲು ಪೊಲೀಸರು ಬ್ಯಾಂಕಿನಿಂದ ಸಂಪೂರ್ಣ ವಹಿವಾಟು ವಿವರಗಳನ್ನು ಕೋರಿದ್ದಾರೆ.

ಇಬ್ಬರು ಸಹೋದರರು ಬಳಸಿದ ಹಲವಾರು ಇತರ ಬ್ಯಾಂಕ್ ಖಾತೆಗಳನ್ನು ಸಹ ಈಗ ಬಂದ್ ಮಾಡಲಾಗಿದೆ. ಸಂಪೂರ್ಣ ಹಣದ ಜಾಡು ಸ್ಥಾಪಿಸಲು ಪೊಲೀಸರು ಹಳೆಯ ಖಾತೆಗಳ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

**CHANGE OF NAME**

I, **ANWAR HUSEN** (new name), previously called **ANWAR HUSSAIN** (old name), resident of 1st Cross, Opposite ESI Hospital Road, B.D. Layout, Davanagere - 577001, Karnataka, India have changed my name as **ANWAR HUSEN** vide affidavit dated 03-11-2025 sworn before Notary I.P. Brahmakumar, Davangere. Henceforth all my transactions & dealings will be in my new name **ANWAR HUSEN.**